
# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXIV - 10 ಅಕ್ಟೋಬರ್ 2006

Rs. 5/-



ಮೈಸೂರು ದಸರಾ ಸಂದರ್ಭದಲ್ಲಿ ಅಲಂಕೃತಗೊಂಡ ಅರಮನೆ

**The Mysore Association, Bombay**

393, Bhaudaji Road, Matunga, Mumbai - 400 019.


Phone : 2402 4647, 2403 7065 • Fax : 2401 0574

E-mail : karunadu@bom5.vsnl.net.in

ಅಸೋಸಿಯೇಶನ್‌ನಲ್ಲಿ

# ಸುಗಮ ಸಂಗೀತ ಸಂಜೆ

ನವರಾತ್ರಿ ಹಬ್ಬದ ಮೊದಲ ದಿನ, ಸಂಜೆ 7.00 ಮುಂಬಯಿಯಲ್ಲಿ ಮಳೆಯ ಅಬ್ಬರ ಇನ್ನೂ ಪೂರ್ಣ ನಿಂತಿಲ್ಲ. ಹೀಗಿರುವಲ್ಲಿ, ತುಮಕೂರಿನ ಉದಯೋನ್ಮುಖ ಯುವ ಕಲಾವಿದೆ ಕುಮಾರಿ ವಿ. ಎಸ್. ಶೃತಿ ಅತ್ಯಂತ ಸುಗಮವಾಗಿ, ಸುಲಲಿತವಾಗಿ, ಸುಮಧುರವಾಗಿ ಕನ್ನಡದ ಅನೇಕ ಹೆಸರಾಂತ ಕವಿಗಳ ಸುಪರಿಚಿತವಾದ ಮತ್ತು ಕೆಲವು ಅಪರಿಚಿತವಾದ ಕವನಗಳನ್ನೂ, ಕೆಲವು ಜಾನಪದ ಗೀತೆಗಳನ್ನೂ ಹಾಡಿ ನೆರೆದಿದ್ದ ರಸಿಕರ ಮನ ತಣಿಸಿದರು. ಸುಶ್ರಾವ್ಯವಾದ ಕಂಠವನ್ನು ದೈವದತ್ತವಾಗಿ ಪಡೆದಿರುವ ಶೃತಿ ತಮ್ಮ ಹೆಸರಿಗೂ, ಕಂಠಸಿರಿಗೂ ಪೂರ್ಣರೂಪದಲ್ಲಿ ಸಾರ್ಥಕತೆಯನ್ನೊದಗಿಸಿದರೆನ್ನಬಹುದು.




ಕುಮಾರಿ ವಿ. ಎಸ್. ಶೃತಿ ಮತ್ತು ತಬಲಾದಲ್ಲಿ ಶ್ರೀ. ಕೃಷ್ಣ ಕಾಮತ್, ಕೀಬೋರ್ಡ್ ನಲ್ಲಿ ಶ್ರೀ ದೇವರಾಜ್ ಹಾಗೂ ರಿದಮ್‌ನಲ್ಲಿ ಶ್ರೀ. ಸುಂದರ್

ಅಪ್ಪಾಗಿ ಕೇಳಿರದ ಮೊದಲ ಹಾಡು ಗಣಪತಿಯ ವಂದನೆ 'ಕೋಟಿ ಕೋಟಿ ನಮನ ನಿನಗೆ ಮಹಾ ಗಣಪತಿ' ಬಹಳ ಸುಂದರವಾಗಿ ಮೂಡಿ ಬಂತು. ನಂತರ ಎಚ್. ಎಸ್. ವೆಂಕಟೇಶ ಮೂರ್ತಿಯವರ 'ಹರಿ ಚರಣಕೆ ನಾ ಶರಣಾದೆ', ಕನಕದಾಸರ 'ತೊರೆದು ಜೀವಿಸಬಹುದೆ ಹರಿ ನಿನ್ನ ಚರಣಗಳ' ಮತ್ತು ಎಚ್. ಎಸ್. ವೆಂಕಟೇಶ ಮೂರ್ತಿಯವರ ಇನ್ನೊಂದು ಕೃತಿ 'ಲೋಕದ ಕಣ್ಣಿಗೆ ರಾಧೆಯು ಕೂಡ' ಇವು ಸ್ವಲ್ಪ ಒಂದೇ ರಾಗದಲ್ಲಿ ಬಂದಂತೆ ತೋರಿ ಬಂದವು. ಆನಂತರ ಕೆ. ಎಸ್. ನರಸಿಂಹ ಮೂರ್ತಿಯವರ 'ದೀಪವು ನಿನ್ನದೆ, ಗಾಳಿಯು ನಿನ್ನದೆ', ಜಿ. ಎಸ್. ಶಿವರುದ್ರಪ್ಪನವರ 'ಎದೆ ತುಂಬಿ ಹಾಡುವೆನು', ಗೋಪಾಲ ಕೃಷ್ಣ ಅಡಿಗರ 'ಯಾವ ಮೋಹನ ಮುರಳಿ ಕರೆಯಿತೋ', ಎಸ್. ವಿ. ಪರಮೇಶ್ವರ ಭಟ್ಟರ 'ಪ್ರೀತಿಯ ಕರೆ ಕೇಳಿ', ದ. ರಾ. ಬೇಂದ್ರಯವರ 'ಘಮ ಘಮ ಘಮಾಡಸ್ತಾವ ಮಲ್ಲಿಗಿ', ಕುವೆಂಪುರವರ 'ಇಳಿದು ಬಾ ತಾಯಿ' ಇವು ಚಿರಪರಿಚಿತವಾದ ಭಾವಗೀತೆಗಳಾಗಿದ್ದು ಎಲ್ಲರಿಗೂ ಖುಶಿ ಕೊಟ್ಟವು. ಇದಲ್ಲದೆ ಎಮ್. ಎನ್. ವ್ಯಾಸರಾಯರ 'ನೀನಿಲ್ಲದೆ ಹೇಗಿರಲಿ', ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರ 'ತಾಯೆ ನಿನ್ನ ಮಡಿಲಲ್ಲಿ' ಮತ್ತು ಪ್ರೇಕ್ಷಕರ ಕೋರಿಕೆಯ ಮೇರೆಗೆ ಹಾಡಿದ ಒಂದು ಚಿತ್ರಗೀತೆ 'ಮಂಗಳವು ಈ ಸುದಿನ' ಎಂಬ ಭಾವಗೀತೆಗಳೂ ರಂಜಿಸಿದವು. ಭಾವಗೀತೆಗಳ ಮಧ್ಯೆ ಶೃತಿ 'ಮೂಡಲ್ ಕುಣಿಗಲ್ ಕೆರೆ' ಮತ್ತು 'ಅಣ್ಣ ಬರ್ತಾನೆ ಗೌರಿ ಹಬ್ಬಕ್ಕೆ' ಜಾನಪದ ಗೀತೆಗಳನ್ನೂ ಹಾಡಿದರು.

ಚಿಕ್ಕ ವಯಸ್ಸಿನಿಂದಲೂ ಹಾಡುತ್ತಿರುವ ಶೃತಿಗೆ ಅನೇಕ ಪಾರಿತೋಷಕಗಳು ಬಂದಿರುತ್ತವೆ. ಇವರು 'ಈ' ಟಿವಿಯ ಕನ್ನಡದ ಜನಪ್ರಿಯ ವಾಹಿನಿಯಲ್ಲಿ ಪ್ರಸಾರವಾಗುವ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲೂ ಭಾಗವಹಿಸಿರುತ್ತಾರೆ. ಕನ್ನಡದ ಇತರ ವಾಹಿನಿಗಳಾದ ಚಂದನ ಹಾಗೂ ಉದಯ ವಾಹಿನಿಯ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ಕರ್ನಾಟಕದಲ್ಲಂತೂ ತುಂಬ ಪರಿಚಿತರಾಗಿದ್ದಾರೆ. ಮುಂಬಯಿನ ಅನೇಕ ಕಡೆಗಳಲ್ಲಿ ವಾಸಿಸುವ ಕನ್ನಡಿಗರಿಗೆ ಈ ಎಲ್ಲ ಕನ್ನಡದ ವಾಹಿನಿಗಳನ್ನು ವೀಕ್ಷಿಸುವ ಸೌಭಾಗ್ಯ ದೊರಕದಿರುವುದರಿಂದ ಶನಿವಾರ ಸೆಪ್ಟೆಂಬರ್ 23 ರಂದು ಮೈಸೂರು ಅಸೋಸಿಯೇಶನ್ ಏರ್ಪಡಿಸಿದ ಈ ಕಾರ್ಯಕ್ರಮದಿಂದ ಉತ್ತಮ ಅವಕಾಶ ದೊರಕಿದಂತಾಯ್ತು. ಕುಮಾರಿ ಶೃತಿಯವರಿಗೆ ತಬಲಾದಲ್ಲಿ ಶ್ರೀ. ಕೃಷ್ಣ ಕಾಮತ್, ಕೀಬೋರ್ಡ್‌ನಲ್ಲಿ ಶ್ರೀ. ದೇವರಾಜ್ ಹಾಗೂ ರಿದಮ್‌ನಲ್ಲಿ ಶ್ರೀ. ಸುಂದರ್ ಅವರು ಸಹಕರಿಸಿದರು. ಶ್ರೀ. ಕೃಷ್ಣ ಕಾಮತ್ ಅವರು ಗಾಯನಗಳ ನಡುನಡುವೆ ತಮ್ಮ ಮಿಮಿಕ್ರಿಯಿಂದ ಪ್ರೇಕ್ಷಕರನ್ನು ನಗಿಸುವ ಅವಶ್ಯಕ ಚೇಷ್ಟೆಯನ್ನೂ ಮಾಡಿದರು.

ಕುಮಾರಿ ಶೃತಿಯವರಲ್ಲಿ ಒಳ್ಳೆಯ ಪ್ರತಿಭೆ ಇದೆ. ಇನ್ನೂ ಕಿರಿಯ ವಯಸ್ಸಿನವರಾದ ಇವರ ಹಾಡುಗಾರಿಕೆಯಲ್ಲಿ ಅನುಭವದ ಅಪಕ್ವತೆ ಎದ್ದು ಕಾಣುತ್ತಿತ್ತು. ಇದೇನೂ ಅಂಥ ದೋಷವಲ್ಲ. ಇತರರನ್ನು ಅನುಕರಿಸುವ ಪ್ರಯತ್ನ ಮಾಡದೆ ತಮ್ಮದೇ ಸ್ವಂತಿಕೆಯನ್ನು ಬೆಳೆಸಿಕೊಳ್ಳುತ್ತ ಇವರು ತಮ್ಮ ಸಾಧನೆಯನ್ನು ಬಲಗೊಳಿಸುತ್ತ ಸಾಗಿದಲ್ಲಿ ಕುಮಾರಿ ಶೃತಿ ಬಹಳ ಶೀಘ್ರವಾಗಿ ಅಪಾರವಾದ ಯಶಸ್ಸನ್ನು ಕಾಣುವರೆಂಬುದರಲ್ಲಿ ಸಂದೇಹವಿಲ್ಲ.

# ನಗೆ ನಗೆ ನಗೆ

ಹುಸಿ ನಗುವಲ್ಲ, ಮುಗುಳ್ನಗುವಲ್ಲ, ಮುಗ್ಧ ನಗುವಲ್ಲ, ಎಲ್ಲರೂ ಮನಃ ಬಿಚ್ಚಿ ನಕ್ಕ ಹೊಟ್ಟೆ ಹುಣ್ಣಾಗಿಸಿದ ನಗು.

ಮನುಷ್ಯನ ಶಾರೀರಕ ಆರೋಗ್ಯಕ್ಕೆ ಗಾಳಿ, ನೀರು, ಆಹಾರ ಹೇಗೆ ಮುಖ್ಯವೋ ಮಾನಸಿಕ ಆರೋಗ್ಯಕ್ಕೆ ನಗುವು ಅಷ್ಟೇ ಮುಖ್ಯ. ಇದು ಮೊದಲಿನ ಕಾಲದಿಂದಲೂ ಬಂದಿರುವ ಒಂದು ಅಭಿಪ್ರಾಯ. ಹಿಂದಿನ ಕಾಲದಲ್ಲಿ ನಗಿಸಲು 'ವಿದೂಷಕ'ರೆಂದಿರುತ್ತಿದ್ದರು. ತೆನಾಲಿ ರಾಮ, ಬೀರಬಲ್, ಮೊದಲಾದ ಆಸ್ಥಾನ ವಿದೂಷಕರಿದ್ದರು. ಆದರೆ ಈಗ ಆ ಉಲ್ಲಾಸದ ನಗು ಎಷ್ಟು ಜನರಿಗೆ ಲಭ್ಯ?

ಮುಂಬೈನಂಥ ಯಾಂತ್ರಿಕ ಹಾಗೂ ವೇಗ ಗತಿಯ ಜೀವನದಲ್ಲಿ ಜನರಿಗೆ ನಗಲು ವೇಳೆಯೇ ಸಿಗದೆ ನಗುವು ಅಪರೂಪದ ವಸ್ತುವಾಗಿ ಬಿಟ್ಟಿದೆ. ದುಡಿದು ಬೇಸತ್ತ ಮುಂಬೈಕರರಿಗೆ ಚೈತನ್ಯ ತುಂಬಲು ಮೈಸೂರು ಅಸೋಸಿಯೇಷನ್ ಸೆಪ್ಟೆಂಬರ್ 30ರ ಶನಿವಾರದಂದು 'ಹರಟೆ ಮಲ್ಲರ ಹಾಸ್ಯ ಮೇಳ' ಎಂಬ ಒಂದು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಂದಿನ ವಿದೂಷಕರು ಕರ್ನಾಟಕದ ಹೆಸರಾಂತ ಹಾಸ್ಯ ಚಕ್ರವರ್ತಿಗಳಾದ ಶ್ರೀ ರಿಚರ್ಡ್ ಲೂಯಿಸ್, ಶ್ರೀ ಎಂ. ಎಸ್. ನರಸಿಂಹಮೂರ್ತಿ, ಶ್ರೀ ಮೈಸೂರು ಆನಂದ್ ಅವರುಗಳು.

ಕಾರ್ಯಕ್ರಮಕ್ಕೆ ಶ್ರೀ ಎಂ. ಎಸ್. ನರಸಿಂಹ ಮೂರ್ತಿಯವರು ಚಾಲನೆ ನೀಡಿದರು. ಅವರು ಸಣ್ಣ ಮಕ್ಕಳ ಮುಗ್ಧ ಮಾತುಗಳಲ್ಲೇ ಹಾಸ್ಯದ ಎಳೆಗಳನ್ನು ಗುರುತಿಸಿ ಜನರನ್ನು ನಗಿಸಿದರು. ನಂತರ ರಿಚರ್ಡ್ ಲೂಯಿಸ್ ಹಾಗೂ ಮೈಸೂರ್ ಆನಂದ್ ಅವರು



ಶ್ರೀ ಎಂ. ಎಸ್. ನರಸಿಂಹಮೂರ್ತಿ



ಶ್ರೀ ರಿಚರ್ಡ್ ಲೂಯಿಸ್



ಶ್ರೀ ಮೈಸೂರು ಆನಂದ್




'ಹರಟೆ ಮಲ್ಲರ ಹಾಸ್ಯ ಮೇಳ' ಕಾರ್ಯಕ್ರಮಕ್ಕೆ ಆಗಮಿಸಿದ್ದ ಮೂವರು ವಿದೂಷಕರನ್ನು ಪರಿಚಯಿಸುತ್ತಿರುವ ಶ್ರೀಮತಿ ರಮಾ ವಸಂತ್

ನಮ್ಮ ದಿನ ನಿತ್ಯ ಜೀವನದ ಆಗು ಹೋಗುಗಳು, ನಾವು ಆಡುವ ಮಾತುಗಳು ಪ್ರತಿಯೊಂದರಲ್ಲೂ ಹಾಸ್ಯ ಹೇಗೆ ಅಡಗಿದೆ ಎಂದು ತಿಳಿಸಿದರು. ಉದಾ : Convent ಗೆ ಹೋಗುವ ಹುಡುಗಿ ಅಮ್ಮನನ್ನು Mum ಎಂದೂ ಚಿಕ್ಕಮ್ಮ, ದೊಡ್ಡಮ್ಮಂದಿರನ್ನು Minimum, Maximum ಎಂದೂ ಕರೆಯುತ್ತಾಳೆ, ಇದರಿಂದ ಪಾಶ್ಚಾತ್ಯರ ಅನುಕರಣೆ ಹೇಗೆ ಕೆಲವು ವೇಳೆ ಹಾಸ್ಯಾಸ್ಪದವಾಗಿರುತ್ತದೆ ಎಂದು ತೋರಿಸಿ ಕೊಟ್ಟರು. ಲೂಯಿಸ್ ಅವರು ನಗುವಿನಿಂದ ಹೇಗೆ ಮಾಂಸ ಖಂಡಗಳು ಸಡಿಲವಾಗಿ ಆರೋಗ್ಯಕ್ಕೆ ಸಹಾಯ ವಾಗುತ್ತದೆ ಎಂಬುದನ್ನು ಹಾಸ್ಯಮಯವಾಗೇ ತಿಳಿಸಿದರು. ಗಂಡ ಹೆಂಡತಿಯರ ಸಂಭಾಷಣೆಯಲ್ಲಿ ಅಡಗಿದ ತಿಳಿ ಹಾಸ್ಯ ಹೇಗಿರತ್ತೆ, ಸ್ಕೂಲಿನಲ್ಲಿ ಮೇಷ್ಟ್ರನ್ನು ಹೇಗೆ ಹಾಸ್ಯದಿಂದ ಏಮಾರಿಸುತ್ತಿದ್ದರು ಮುಂತಾಗಿ ಹಾಸ್ಯ ಭರಿತ ಸನ್ನಿವೇಶಗಳನ್ನು ವಿವರಿಸಿದರು. ಭಾರವಾದ ವಸ್ತು ಮೇಲೆ ಎಸೆದರೆ ಕೆಳಗೆ ಯಾಕೆ ಬೀಳತ್ತೆ? ಇಲ್ಲಿ ವಿಜ್ಞಾನದ ಬಗ್ಗೆ ತಲೆ ಕೆಡಿಸಿಕೊಳ್ಳೋದೆ ಬೇಡ, ಸುಲಭವಾದ ಉತ್ತರ. ''ಮೇಲೆ Catch ಹಿಡ್ಕೊಳ್ಳೋಕ್ಕೆ ಯಾರೂ ಇಲ್ಲ ಅಂತ''. ಹೀಗೆ ಅನೇಕ ಹಾಸ್ಯಮಯ ಸನ್ನಿವೇಶಗಳನ್ನು ಹೇಳಿದರು. ಮೈಸೂರು ಆನಂದ್ ಅವರು ತಮ್ಮ ಕಂಠ ಸಿರಿಯಿಂದ ಇಂಪಾಗಿ ಹಾಡಿದರು. ಕ್ರಿಕೆಟ್‌ನ ಹರಿಕಥೆಯನ್ನು, ಇಂಗ್ಲೀಷ್ ನಲ್ಲಿ, ನಂಜನಗೂಡಿನ ಗ್ರಾಮ್ಯ ಭಾಷೆಯಲ್ಲಿ, ಮಂಗಳೂರು ಕನ್ನಡದಲ್ಲಿ ಹಾಗೂ ಜ್ಯೋತಿಷ್ಯದ ಪ್ರಖ್ಯಾತ S.K. Jain ಅವರ ಅನುಕರಣೆಯಲ್ಲಿ ಬಹಳ ಚೆನ್ನಾಗಿ ಅಭಿನಯಿಸಿ ತೋರಿಸಿದರು. ಪಾಶ್ಚಿಮಾತ್ಯರ ಅನುಕರಣೆಯಿಂದ ಕನ್ನಡ ಚಿತ್ರಗಳ ಸಂಭಾಷಣೆ ಹಾಡುಗಳು ಯಾವ ರೀತಿ ಅವಗತಿ ಹೊಂದುತ್ತಿದೆ ಎಂದು ಹಾಸ್ಯಮಯವಾಗಿ ಹೇಳಿದರು. ಕೆಲವು ಹಳೆಯ ಕನ್ನಡ ಚಿತ್ರಗಳ ಜನ ಜನಿತವಾದ ಹಾಡುಗಳು ಶ್ರೋತೃಗಳನ್ನು ಮೆಚ್ಚಿಸಿದವು. ಹೆಸರಿಗೆ ತಕ್ಕಂತೆ ಆನಂದ್ ಅವರು ತಮ್ಮ ವಿಶೇಷ ಹಾಸ್ಯಗಳಿಂದ ಎಲ್ಲರನ್ನು ಆನಂದಗೊಳಿಸಿದರು.

2 ಘಂಟೆಗಳ ಕಾಲ ಎಲ್ಲರನ್ನು ನಗೆ ಗಡಲಿನಲ್ಲಿ ಮುಳುಗಿಸಿ ಚೇತೋಹಾರಿಯಾದ ಹಾಸ್ಯದ ರಸವನ್ನು ಎಲ್ಲರಿಗೂ ಉಣಿಸಿ ಸಂತೋಷಗೊಳಿಸಿದರು.

ಸೆಪ್ಟೆಂಬರ್ ತಿಂಗಳ ಈ ಎರಡೂ ಕಾರ್ಯಕ್ರಮಗಳಿಗೆ MSIL ನವರು ಪ್ರಾಯೋಜಕತ್ವ ವಹಿಸಿದ್ದರು.

- ರಮಾ ವಸಂತ್

## FORTHCOMING PROGRAMMES

From November **5th to 12th, the** Association is organising an **Advanced Workshop in Carnatic Music** by Smt. Nagamai Shrinath of Mysore. For details contact Mysore Association office.

**On December 15th 2006**, the Association is staging a Music concert as part of its **Fund Raising Programme** at Nehru Centre, Mumbai. All the Members are requested to work collectively to make it a grand success. Details will be finalised soon and members will be informed accordingly.

*ನೇಸರುವಿನ*
*ಓದುಗರಿಗೆ*
*ದೀಪಾವಳಿ ಮತ್ತು*
*ನಾಡ ಹಬ್ಬದ*
*ಶುಭಾಶಯಗಳು.*

# ಹೊರನಾಡ ಕನ್ನಡಿಗರ ಸಾಹಸ ಸಾಧನೆ

*(ಕಳೆದ ಸಂಚಿಕೆಯಿಂದ)*

- ಡಾ. ಜಿ.ಎನ್. ಉಪಾಧ್ಯ

**ಕಲಾಕ್ಷೇತ್ರ :** ಕಲಾವಿದ ಪಾವಂಜೆ ಗುರುರಾಯರ ಕರ್ಮಭೂಮಿ ಮುಂಬಯಿ. ರಾಜಾರವಿವರ್ಮರ ಸಮಕಾಲೀನರು. ಜೆ. ಜೆ. ಕಲಾಮಹಾವಿದ್ಯಾಲಯಕ್ಕೆ ಸೇರಿದ ಮೊದಲ (೧೮೮೫) ಕನ್ನಡಿಗ. ಅಲ್ಲಿ ಪ್ರಾಧ್ಯಾಪಕರಾಗಿ ಸೇವೆ. ಕೆ. ಕೆ. ಹೆಬ್ಬಾರರಿಗೂ ಪಾವಂಜೆ ಅವರೇ ದೊಡ್ಡ ಪ್ರೇರಣೆ. ಹೆಬ್ಬಾರರಂತೂ ಕಲೆಯ ಮೂಲಕ ಮನೆ ಮಾತಾದವರು. ಎಸ್. ಸಿ. ದೇಸಾಯಿ, ಎಸ್. ಎಂ. ಪಂಡಿತ್, ಅಲಮಟ್ಟಿ, ನಾಗೇಶ್ ಸಾಬಣ್ಣವರ್, ದೇವದಾಸ ಶೆಟ್ಟಿ, ರೇಖಾ ಹೆಬ್ಬಾರ್, ಹೀಗೆ ಅನುಪಾವಂಜೆ ಯವರೆಗೆ ಕನ್ನಡಿಗರು ಕಲಾಕ್ಷೇತ್ರದಲ್ಲಿ ಮೆರೆದಿದ್ದಾರೆ. ವ್ಯಂಗ್ಯ ಚಿತ್ರಕಾರ ಆರ್. ಕೆ. ಲಕ್ಷ್ಮಣ್ ಪಂಜು ಗಂಗೊಳ್ಳಿ ಅವರ ಹೆಸರು ಕೇಳದವರಿಲ್ಲ.

**ಯಕ್ಷಗಾನ :** ಕರ್ನಾಟಕದ ಹೆಮ್ಮೆಯ ಕಲೆಯಾದ ಯಕ್ಷಗಾನವನ್ನು ಪೋಷಿಸಿದ ಕೀರ್ತಿ ಮುಂಬಯಿ ಕನ್ನಡಿಗರಿಗೆ ಸೇರುತ್ತದೆ. ಮುಂಬಯಿಯಲ್ಲೇ ಯಕ್ಷಗಾನ ಮೇಳಗಳು ಹುಟ್ಟಿ ಬೆಳೆದು ಕಲಾ ಸೇವೆಯಲ್ಲಿ ನಿರತವಾಗಿವೆ. ಗುರುನಾರಾಯಣ ಯಕ್ಷಗಾನ ಮಂಡಳಿ ಕಳೆದ ಅರವತ್ತು ವರ್ಷಗಳಿಂದ ಯಕ್ಷಗಾನ ರಂಗದಲ್ಲಿ ಗೈದ ಸೇವೆ ಉಲ್ಲೇಖನೀಯ ಅಂಶ. ಪದವೀಧರ ಯಕ್ಷಗಾನ ಸಮಿತಿ ೧೦ ಯಕ್ಷಗಾನ ಸಾಹಿತ್ಯ ಸಮ್ಮೇಳನಗಳನ್ನು ಮುಂಬಯಿಯಲ್ಲಿ ನಡೆಸಿ ಒಳನಾಡಿನ ಕನ್ನಡಿಗರು ಬೆರಗುಗೊಳ್ಳುವಂತೆ ಮಾಡಿದೆ. ಇತ್ತೀಚೆಗೆ ನಿಧನರಾದ ಅರ್ಥಧಾರಿ ಅಡ್ಡೆ ವಾಸು ಶೆಟ್ಟಿ ಅವರು ತಾಳಮದ್ದಲೆ ಕ್ಷೇತ್ರದ ಭೀಷ್ಮ ರೆಂದೇ ಖ್ಯಾತಿ ಪಡೆದಿದ್ದರು.

**ಸಂಗೀತ - ನೃತ್ಯ :** ಮುಂಬಯಿ ಬರೇ ವಾಣಿಜ್ಯ ಮಹಾನಗರವಲ್ಲ. ಕಲೆ, ಸಾಹಿತ್ಯ, ಸಂಗೀತ, ನಾಟಕಕ್ಕೂ ಇಲ್ಲೀ ಮನ್ನಣೆ ಸಿಕ್ಕಿದೆ. ಮೈಸೂರು ವೀಣಾ ಪರಂಪರೆಯನ್ನು ಮುಬಯಿಯಲ್ಲಿ ದಾಂಗುಡಿಯಿಡುವಂತೆ ಮಾಡಿದವರು ವಿದ್ವಾನ್ ಸಿ. ಕೆ. ಶಂಕರನಾರಾಯಣರಾವ್. ಶ್ರೀಮತಿ ರಾಜೇಶ್ವರಿ ಮೂರ್ತಿಯವರು ಬಾಂದ್ರಾದ ತಮ್ಮ ಮನೆಯಲ್ಲಿಯೇ ೨೫ ವರ್ಷಗಳಿಂದ ಕರ್ನಾಟಕ ಶೈಲಿಯಲ್ಲಿ ವೀಣೆಯ ಪಾಠವನ್ನು ಮಾಡುತ್ತಾ ಬಂದಿರುತ್ತಾರೆ. ಮೈಸೂರು ಸಂಗೀತ ವಿದ್ಯಾಲಯ ಕಳೆದ ೨೫ ವರ್ಷಗಳಿಂದ ಡೊಂಬಿವಲಿ ಭಾಗದಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಕರ್ನಾಟಕ ಸಂಗೀತದ ಪಾಠವನ್ನು ಕಲಿಸಿಕೊಟ್ಟಿದೆ. ಈ ನಿಟ್ಟಿನಲ್ಲಿ ಶ್ರೀಮತಿ ಉಮಾನಾಗಭೂಷಣರ ಸೇವೆ ಗಮನಾರ್ಹವಾದುದು. ಹಿಂದೂಸ್ತಾನಿ ಶೈಲಿಯಲ್ಲಿ ಶ್ರೀ ಶಿವಾನಂದ ಪಾಟೀಲ್ ಸಾಕಷ್ಟು ಹೆಸರು ಮಾಡಿರುತ್ತಾರೆ. ಈಚೆಗೆ ಶ್ರೀ ಚಿಮ್ಮಲಗಿಯವರು ಸಹ ಕೊಳಲು ವಾದನದಲ್ಲಿ ಹೆಸರು ಮಾಡುತ್ತಿದ್ದಾರೆ. ಈಗ ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀಮತಿ ಗೀತಾ ವಿಶ್ವನಾಥ್ ಅವರು ಹೆಸರಾಂತ ನೃತ್ಯ ಕಲಾವಿದೆಯಾಗಿದ್ದು ಅನೇಕ ಉತ್ತಮ ನೃತ್ಯ ರೂಪಕಗಳನ್ನು ರಚಿಸಿರುತ್ತಾರೆ.

> ನಾವೀಗ ಸುವರ್ಣ ಕರ್ನಾಟಕದ ಸಂಭ್ರಮದಲ್ಲಿದ್ದೇವೆ. ಕರ್ನಾಟಕ ಏಕೀಕರಣಗೊಂಡು ಐವತ್ತು ವರ್ಷಗಳು ಸಂದು ಹೋಗಿವೆ. ಸುಮಾರು ಎರಡು ಕೋಟಿ ಜನ ಭಾರತದ ವಿವಿಧ ರಾಜ್ಯಗಳಲ್ಲಿ ನೆಲೆಸಿ ಕರ್ನಾಟಕ ಸಾಂಸ್ಕೃತಿಕ ಬಲವರ್ಧನೆಗೆ ಶ್ರಮಿಸುತ್ತಿದ್ದಾರೆ. ಐವತ್ತು ವರ್ಷಗಳಲ್ಲಿ ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಸಾಧನೆಯನ್ನು ಡಾ. ಜಿ. ಎನ್. ಉಪಾಧ್ಯ ಅವರು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಅದರ ಕೊನೆಯ ಭಾಗವನ್ನು ಇಲ್ಲಿ ಪ್ರಕಟಿಸಿದೆ.

**ಚಲನಚಿತ್ರ :** ಬಾಲಿವುಡನಲ್ಲಿ ಕನ್ನಡಿಗರ ಪಾರುಪತ್ಯಕ್ಕೆ ದೊಡ್ಡ ಇತಿಹಾಸವಿದೆ. ವಿ. ಶಾಂತಾರಾಮ್, ಗುರುದತ್, ವಿ. ಕೆ. ಮೂರ್ತಿ, ಶ್ಯಾ ಬೆನೆಗಲ್, ಎಂ. ಎಸ್. ಸತ್ಯು, ಶಾಂತಾ ಆಪ್ಟೆ, ವೈಜಯಂತಿಮಾಲಾ, ಐಶ್ವರ್ಯ ರೈ, ಶಿಲ್ಪಾ ಶೆಟ್ಟಿ, ಸುನೀಲ್ ಶೆಟ್ಟಿ ಮೊದಲಾದವರು ಕರ್ನಾಟಕ ಮೂಲದವರೇ ಎಂಬುದು ಅಭಿಮಾನದ ಸಂಗತಿ.

**ಕನ್ನಡದ ಕೈಂಕರ್ಯ :** ಸಂಘಟನಾ ಕ್ಷೇತ್ರದಲ್ಲಿ ಎ.ಎಸ್.ಕೆ. ರಾವ್, ಶ್ರೀಮತಿ ಜಯಾ ರಾವ್, ಉಷಾ ಜೈರಾಂ, ಆರ್. ವಿ. ಮೂರ್ತಿ, ಜಿ. ನಾರಾಯಣ ಸ್ವಾಮಿ, ಜಯ ಸುವರ್ಣ, ಸಂಜೀವ ಕಾಂಚನ್, ಎಚ್. ಬಿ. ಎಲ್. ರಾವ್, ಎಲ್. ವಿ. ಅಮೀನ್, ನಿತ್ಯಾನಂದ ಕೋಟ್ಯಾನ್, ಎಸ್. ಕೆ. ಸುಂದರ್, ಎಂ. ಎ. ಎನ್ ಪ್ರಸಾದ್, ಮಂಜುನಾಥಯ್ಯ, ಎಸ್. ಸುಬ್ರಮಣಿ, ಧರ್ಮಪಾಲ ದೇವಾಡಿಗ, ಡಾ. ಕೆ. ರಘುನಾಥ, ಜಿ. ಟಿ. ಆಚಾರ್ಯ ರಾಮ್ಮಾರಾಯಣ ಬಲ್, ವಾಮನ್ ಶೆಟ್ಟಿ, ನಂದಾ ಶೆಟ್ಟಿ, ಭರತ್‌ಕುಮಾರ ಪೊಲಿಪು, ಎಂ. ಎಂ. ಕೋರಿ, ವೈ. ಕೆ. ರಾವ್, ಶಂಕರ್ ಶೆಟ್ಟಿ, ಬಿ. ಎಚ್. ಕಟ್ಟಿ, ಬಾಲಚಂದ್ರರಾವ್, ಭಾಸ್ಕರ ಸರಪಾಡಿ, ಎಂ. ಕೆ. ಜನಾರ್ದನ್, ಸದಾನಂದ ಶೆಟ್ಟಿ, ಟಿ. ಎಸ್. ಉಪಾಧ್ಯಾಯ, ಜಿ. ಎಸ್. ನಾಯಕ್, ಬಿ. ನಾಗಭೂಷಣ್, ಎ. ಬಿ. ಶೆಟ್ಟಿ, ಶೇಖರ ಅಮೀನ್, ಮೊದಲಾದವರ ಕಾಣಿಕೆ ಸಣ್ಣ ಪ್ರಮಾಣದ್ದಲ್ಲ. ಇವರೆಲ್ಲರ ಪರಿಶ್ರಮದಿಂದ ಕನ್ನಡ ಭಾಷೆ ಸಂಸ್ಕೃತಿ ಈ ಮಹಾನಗರದಲ್ಲಿ ಪಸರಿಸಲು ಕಾರಣವಾಗಿದೆ. ''ಕನ್ನಡಕ್ಕಾಗಿ ಮಾಡಿದ ಕೆಲಸ ಬರೇ ಕನ್ನಡದ ಕೆಲಸವಲ್ಲ, ಅದು ನಾಡಿನ ಕೆಲಸ, ನಾಡಿನ ಕೆಲಸ ಲೋಕದ ಕೆಲಸವು ಹೌದು'' ಎಂಬ ಹಾಮಾನಾ ಅವರ ಮಾತು ಮುಂಬಯಿಯ ಈ ಕನ್ನಡ ಸೇನಾನಿಗಳಿಗೆ ಚೆನ್ನಾಗಿ ಅನ್ವಯಿಸುತ್ತದೆ.

**ಬ್ಯಾಂಕಿಂಗ್ ಕ್ಷೇತ್ರ :** ಕರ್ನಾಟಕಕ್ಕೂ ಬ್ಯಾಂಕಿಂಗ್ ಕ್ಷೇತ್ರಕ್ಕೂ ಅವಿನಾಭಾವ ಸಂಬಂಧವಿದೆ. ಇಂದು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿರುವ ಹೆಚ್ಚಿನ ಬ್ಯಾಂಕುಗಳು ಕರ್ನಾಟಕ ಮೂಲದವು. ಮುಂಬಯಿಯಲ್ಲಿ ನೆಲೆನಿಂತ ಕನ್ನಡಿಗರು ಹಣಕಾಸು ಕ್ಷೇತ್ರದಲ್ಲಿಯೂ ಯಶಸ್ಸು ಸಾಧಿಸಿದ್ದಾರೆ. ಶ್ಯಾಮರಾವ್ ವಿಠಲ್ ಕೊ. ಆಪ್. ಬ್ಯಾಂಕ್, ಭಾರತ್ ಕೊ. ಅಪರೇಟಿವ್ ಬ್ಯಾಂಕ್, ಮೊಗವೀರ ಕೊ. ಅಪರೇಟಿವ್ ಬ್ಯಾಂಕ್, ನಾರ್ತ್ ಕೆನರಾ ಜಿಎಸ್‌ಬಿ ಕೊ. ಆಪರೇಟಿವ್ ಬ್ಯಾಂಕ್, ಅಭ್ಯುದಯ ಕೊ. ಆಪ್‌ಬ್ಯಾಂಕ್, ಪ್ರೊಗ್ರೆಸಿವ್ ಕೊ. ಆಪ್. ಬ್ಯಾಂಕ್ ಹೀಗೆ ಹತ್ತಾರು ಬ್ಯಾಂಕುಗಳು ಮುಂಬಯಿ ಮಹಾನಗರದಲ್ಲಿ ತಲೆ ಎತ್ತಿ ತಮ್ಮ ಸೇವೆಯ ಮೂಲಕ ಇಲ್ಲಿನ ಜನರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿರುವುದು ಸಾಮಾನ್ಯ ಸಂಗತಿಯಲ್ಲ.

**ರಾಜಕೀಯ ಕ್ಷೇತ್ರ:** ಜಾರ್ಜ್ ಫರ್ನಾಂಡಿಸ್, ಡಾ. ಲಲಿತಾರಾವ್, ಪಿ. ಎಂ. ಕಾಮತ್, ಸುರೇಶ್ ಶೆಟ್ಟಿ, ಸಂತೋಷ ಶೆಟ್ಟಿ, ಜಗನ್ನಾಥ ಶೆಟ್ಟಿ, ಗೋಪಾಲ ಶೆಟ್ಟಿ, ರಾಮ್ ನಾಯಕ್ ಮೊದಲಾದವರು ರಾಜಕೀಯ ಕ್ಷೇತ್ರದಲ್ಲಿ ಮಿಂಚಿದ ಕನ್ನಡಿಗರು

**ಮುಂಬಯಿಯ ಕೆಲವು ಮೊದಲುಗಳು**

ಸಾಂಸ್ಕೃತಿಕ ಕರ್ನಾಟಕದ ಸಾಧನೆಯನ್ನು ಸಿಂಹಾವಲೋಕನ ಮಾಡುವ ಸಂದರ್ಭದಲ್ಲಿ ಇತಿಹಾಸಕಾರರು ಅನೇಕ ಬಾರಿ ಮುಂಬಯಿ ಕಡೆಗೆ ಮುಖ ಮಾಡಬೇಕಾಗುತ್ತದೆ. ಅಂಥ ಕೆಲವು ಮಹತ್ವದ ಘಟನೆಗಳನ್ನು ಇಲ್ಲಿ ಕೊಡಲಾಗಿದೆ

೧. ಕಾಳಿದಾಸನ ಶಾಕುಂತಲ ನಾಟಕವನ್ನು ಮೊದಲ ಬಾರಿಗೆ ಕನ್ನಡಕ್ಕೆ ಅನುವಾದಿಸಿದವರು ಒಬ್ಬ ಮುಂಬಯಿ ಕನ್ನಡಿಗ. ಚುರಮುರಿ ಶೇಷಗಿರಿರಾಯರ ಶಾಕುಂತಲ ನಾಟಕವು ೧೮೭೦ರಲ್ಲಿ ಮುಂಬಯಿಯಲ್ಲಿ ಪ್ರಕಟವಾಯಿತು. ಚುರಮುರಿ ಅವರು ವೃತ್ತಿಯಲ್ಲಿ ಇಂಜಿನಿಯರ್ !

೨. ಮರಾಠಿ ರಂಗಭೂಮಿಯ ಪಿತಾಮಹ ಅಣ್ಣಾ ಕಿರ್ಲೋಸ್ಕರ್ ಅವರ ಶಾಕುಂತಲ ನಾಟಕಕ್ಕೆ ಚುರಮುರಿ ಅವರ ಕೃತಿಯೇ ಪ್ರೇರಣೆ !

೩. ಕನ್ನಡದ ಮೊದಲ ಸಾಮಾಜಿಕ ನಾಟಕ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ಪ್ರಕಟವಾದುದು ದೂರದ ಮುಂಬಯಿಯಲ್ಲಿ, ಕರ್ಕಿ ವೆಂಕಟರಮಣ ಶಾಸ್ತ್ರಿಗಳು ಬರೆದ ಈ ನಾಟಕ ೧೮೮೭ ರಲ್ಲಿ ಬೆಳಕು ಕಂಡಿತು.

೪. ಕನ್ನಡ ಪತ್ರಿಕೆಯೊಂದರಲ್ಲಿ ಮೊದಲ ಬಾರಿಗೆ ವ್ಯಂಗ್ಯಚಿತ್ರ ಪ್ರಕಟವಾದುದು ಹವ್ಯಕ ಸುಬೋಧದಲ್ಲಿ. (೧೮೮೫) ಇದು ಮುಂಬಯಿಯಿಂದ ಪ್ರಕಟವಾಗುತ್ತಿತ್ತು.

೫. ಶಿವರಾಮ ಕಾರಂತರ ಯಕ್ಷಗಾನ ಬ್ಯಾಲೆ ಪ್ರದರ್ಶನ ಕಂಡದ್ದು ಈ ಮಹಾನಗರದಲ್ಲಿ.

೬. ಖ್ಯಾತ ಕಾದಂಬರಿಕಾರ ಚದುರಂಗ, ಸಾಹಿತಿ ಅನುಪಮ ನಿರಂಜನ, ಬಿ. ಎ. ಸನದಿ ಅವರ ಮೊದಲ ಕತೆಗಳು ಬೆಳಕು ಕಂಡದ್ದು ರಂಗಸ್ವಾಮಿಯವರ ಆದರ್ಶ ಪತ್ರಿಕೆಯಲ್ಲಿ.

೭. ೧೯೫೦ರ ಮುಂಬಯಿ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಒಂದು ಚಾರಿತ್ರಿಕ ಮಹತ್ವವಿದೆ. ಕನ್ನಡ 'ನವ್ಯ ಪಂಥ' ಕಣ್ಣು ಬಿಟ್ಟಿದ್ದೇ ಈ ದೂರದ ಮಹಾನಗರಿಯಲ್ಲಿ. ವಿ. ಕೃ. ಗೋಕಾಕರು ಅದರ ರೂವಾರಿ.

೮. ಕನ್ನಡದ ಮೊದಲ ಪ್ರವಾಸ ಸಾಹಿತ್ಯ ಕೃತಿಯನ್ನು ಬರೆದವರು ಕರ್ಕಿ ವೆಂಕಟರಮಣ ಶಾಸ್ತ್ರಿ (೧೮೮೭) ಕೃತಿಯ ಹೆಸರು ದಕ್ಷಿಣಯಾತ್ರಾ ಚರಿತ್ರೆ.

೯. ಹೊಸಗನ್ನಡದ ಮೊದಲ ಕೃತಿ ಬಿ. ಎಂ. ಶ್ರೀ ಅವರ ಇಂಗ್ಲೀಷ್ ಗೀತೆಗಳು ಎಂಬ ಮಾತಿದೆ. ಇದು ತರವಲ್ಲ. ಮುಂಬಯಿ ಕನ್ನಡಿಗ ಹಟ್ಟಿಯಂಗಡಿ ನಾರಾಯಣರಾಯರ 'ಆಂಗ್ಲ ಕವಿತಾವಳಿ' ಹೊಸಗನ್ನಡದ ಮೊದಲ ಅನುವಾದ ಕಾವ್ಯಕೃತಿ (೧೯೧೯)

೧೦. ಕನ್ನಡ ಲೇಖಕ, ಸಾಹಿತಿಯೊಬ್ಬರು ಸ್ಥಾಪಿಸಿದ ಬ್ಯಾಂಕ್ - ಶ್ಯಾಮರಾವ್ ವಿಠಲ್ ಕೋ. ಬ್ಯಾಂಕ್ , ಕೈಕಿಣೀ ಅವರೇ ಅದರ ಹರಿಕಾರರು.

೧೧. ಪ್ರಸಾರಭಾರತಿಯ ಅಧ್ಯಕ್ಷರಾದ ಮೊದಲ ಕನ್ನಡಿಗ ಎಂ. ವಿ. ಕಾಮತ್. ಅವರೂ ಮುಂಬಯಿ ಕನ್ನಡಿಗರೇ.

ಮುಂಬೈ ಕನ್ನಡಿಗರು ಸಂಘಟನೆಯಲ್ಲಿ ಎತ್ತಿದ ಕೈ. ೧೮೮೮ರಲ್ಲಿ ಹುಟ್ಟಿಕೊಂಡ ಶ್ರೀ ಮಧ್ವಾರಕ ಮಂಡಳಿ ಅತ್ಯಂತ ಹಳೆಯ ಸಂಸ್ಥೆಯೆನಿಸಿದ್ದು ಇಂದಿಗೂ ಅದು ಕ್ರಿಯಾಶೀಲವಾಗಿದೆ. ಪ್ರತಿ ತಿಂಗಳು ಕುಮಾರವ್ಯಾಸ ಭಾರತವಾಚನ ಕಾರ್ಯಕ್ರಮ ನಡೆಯುತ್ತದೆ. ೧೯೦೨ರಲ್ಲಿ ಆರಂಭಗೊಂಡ ಮೊಗವೀರ ವ್ಯವಸ್ಥಾಪಕ ಮಂಡಳಿಯು ೧೯೦೮ ರಲ್ಲಿ ಧರ್ಮಾರ್ಥ ಕನ್ನಡ ರಾತ್ರಿ ಶಾಲೆಯನ್ನು ಸ್ಥಾಪಿಸಿ ಕನ್ನಡಿಗರ ಶೈಕ್ಷಣಿಕ ಆರ್ಥಿಕ ವಿಕಾಸಕ್ಕಾಗಿ ಶ್ರಮಿಸುತ್ತಿದೆ ಕಳೆದ ೭೭ ವರ್ಷಗಳಿಂದ 'ಮೊಗವೀರ' ಮಾಸಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿದೆ. ಇವತ್ತಿಗೂ ಮುಂಬಯಿಯಲ್ಲಿ ಅನೇಕ ಕನ್ನಡ ರಾತ್ರಿ ಶಾಲೆ ಕಾಲೇಜುಗಳು ಅಸ್ತಿತ್ವದಲ್ಲಿರುವುದು ಇಲ್ಲಿನ ಕನ್ನಡಿಗರ ಆಸಕ್ತಿಗೆ ನಿದರ್ಶನ. ಕನ್ನಡಭವನ, ಕೆನರಾ ವಿದ್ಯಾದಾಯಿನಿ, ಯಂಗ್ ಮೆನ್ಸ್, ಗುರುನಾರಾಯಣ ಮೊದಲಾದ ಧರ್ಮಾರ್ಥ ರಾತ್ರಿ ಶಾಲೆಗಳು ಬಡ ಮತ್ತು ಮಧ್ಯಮವರ್ಗದ ಮಕ್ಕಳಿಗೆ ಕನ್ನಡದಲ್ಲೇ ಶಿಕ್ಷಣಕೊಡುತ್ತಿವೆ. ಹಗಲು ಕನ್ನಡ ಶಾಲೆಗಳಲ್ಲಿ ಎನ್. ಕೆ. ಇ. ಎಸ್. ವಡಾಲ, ಚೆಂಬೂರು ಕರ್ನಾಟಕ ಸಂಘದ ಹೈಸ್ಕೂಲು, ಮುಲುಂಡಿನ ವಿ. ಪಿ. ಎಂ. ಶಾಲೆ, ಡೊಂಬಿವಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಮಂಜುನಾಥ ವಿದ್ಯಾಲಯ ಮತ್ತು ಮಹಾವಿದ್ಯಾಲಯ ಹೀಗೆ ಹತ್ತಾರು ಶಾಲೆಗಳನ್ನು ಉದಾಹರಿಸಬಹುದು. ಮುಂಬೈ ಮಹಾನಗರ ಪಾಲಿಕೆಯ ಆಶ್ರಯದಲ್ಲಿ ಸುಮಾರು ೪೭ ಕನ್ನಡ ಶಾಲೆಗಳಿದ್ದು ೮೦೦೦ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಕನ್ನಡದಲ್ಲೇ ಅಧ್ಯಯನ ಮಾಡುತ್ತಿದ್ದಾರೆ. ಉನ್ನತ ಶಿಕ್ಷಣವನ್ನು ಕನ್ನಡದಲ್ಲೇ ಮುಂದುವರಿಸಲು ಇಲ್ಲಿ ಅವಕಾಶವಿದ್ದು ಝುನ್ ಝುನ್‌ವಾಲಾ ಕಾಲೇಜ್‌ನಲ್ಲಿ ಕನ್ನಡ ವಿಭಾಗವಿದೆ. ೧೯೭೯-೧೯೮೦ ರಲ್ಲಿ ಸ್ಥಾಪನೆಗೊಂಡ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ ಭಾಷೆ ಸಾಹಿತ್ಯ ಸಂಸ್ಕೃತಿಯ ಪ್ರಸಾರಕ್ಕಾಗಿ ಶ್ರಮಿಸುತ್ತದೆ. ಎಂ. ಎ. ಎಂಫಿಲ್, ಪಿ. ಎಚ್. ಡಿ. ಅಧ್ಯಯನವಲ್ಲದೆ ಕನ್ನಡ ಡಿಪ್ಲಮಾ ಸರ್ಟಿಫಿಕೆಟ್ ತರಗತಿಗಳನ್ನು ನಡೆಸುತ್ತಿದೆ. ಕಸಾಪ ಮಹಾರಾಷ್ಟ್ರ ಘಟಕ ಮುಂಬೈಯಲ್ಲಿದೆ. ಇಲ್ಲಿ ಕನ್ನಡಿಗರ ಬಹುದಿನಗಳ ಕನಸಾದ 'ಕನ್ನಡ ಭವನ'ವು ತಲೆ ಎತ್ತುವ ಹಂತದಲ್ಲಿದೆ. ಮಾತುಂಗದ ಕರ್ನಾಟಕ ಸಂಘ, ಮೈಸೂರು ಅಸೋಸಿಯೇಷನ್, ಗೋರೆಗಾಂವ್ ಕರ್ನಾಟಕ ಸಂಘ, ಡೊಂಬಿವಲಿ ಕರ್ನಾಟಕ ಸಂಘ, ಕನ್ನಡ ಸಂಘ ಮಾತುಂಗಾ, ಮುಂಬೆಳಕು ಕನ್ನಡ ಬಳಗ ಮೊದಲಾದ ಸಂಸ್ಥೆಗಳು ಹೆಚ್ಚು ಕ್ರಿಯಾಶೀಲವಾಗಿದ್ದು ಕನ್ನಡದ ಪ್ರಗತಿಗೆ ಶ್ರಮಿಸುತ್ತಿವೆ. ಜಾತೀಯ ಸಂಘಗಳೂ ಸಮಾಜದ ಉನ್ನತಿಗೆ ಯತ್ನಿಸುತ್ತಿದೆ. ಮೊಗವೀರ, ಬಂಟ, ಕುಲಾಲ, ಬ್ರಾಹ್ಮಣ, ತಿಯಾ, ದೇವಾಡಿಗ ಬಿಲ್ಲವ, ವಿಶ್ವಕರ್ಮ ಮೊದಲಾದ ಸಂಸ್ಥೆಗಳ ಸಾಧನೆಯೂ ಉಲ್ಲೇಖನೀಯ ಸಂಗತಿ. ಕನ್ನಡ ಪತ್ರಿಕೋದ್ಯಮಕ್ಕೂ ಮುಂಬೈಗೂ ಅವಿನಾಭಾವ ಸಂಬಂಧವಿದೆ. 'ಕರ್ನಾಟಕಮಲ್ಲ' ಮತ್ತು 'ಉದಯವಾಣಿ' ದೈನಿಕಗಳು ಇಲ್ಲಿಂದಲೇ ಪ್ರಕಟವಾಗುತ್ತಿದೆ. ಮೊಗವೀರ, ಅಕ್ಷಯ, ನೇಸರು, ಸ್ನೇಹಸಂಬಂಧ, ಗೋಕುಲವಾಣಿ, ಬಂಟರವಾಣಿ, ಪತ್ರಪುಷ್ಪ, ಹೊರನಾಡ ಸಂಗಾತಿ ಮೊದಲಾದ ಮಾಸಿಕಗಳು ಕನ್ನಡ ಸಂಸ್ಕೃತಿಯನ್ನು ಬೆಳಗುತ್ತಿವೆ. ನಾರಾಯಣ ಪ್ರಸಾದರ ನೇತೃತ್ವದ ಹೊರನಾಡ ಸಂಗಾತಿ ವಿಶ್ವದೆಲ್ಲೆಡೆ ಇರುವ ಕನ್ನಡಿಗರ ಬೃಹತ್ ಡಿರೆಕ್ಟರಿಗಳನ್ನು ವೆಬ್‌ಸೈಟ್‌ಗಳನ್ನು ಹೊರತಂದಿದೆ.

ಕನ್ನಡ ಶಿಕ್ಷಣ ಸಾಹಿತ್ಯ ಸಂಸ್ಕೃತಿಯ ಕುರಿತು ಮಾತನಾಡುವಾಗ ಮದ್ರಾಸ್ ಅಥವಾ ಇಂದಿನ ಚೆನ್ನೈಮಹಾನಗರಕ್ಕೆ ವಿಶೇಷ ಮಹತ್ವ ಪ್ರಾಪ್ತವಾಗುತ್ತದೆ. ಬ್ರಿಟಿಷರ ಕಾಲದಲ್ಲಿಯೇ ಮದ್ರಾಸ್‌ನ ಜೊತೆಗೆ ಕನ್ನಡದ ಸಂಪರ್ಕ ಉಂಟಾಯಿತು. ಇಂದಿನ ಕರ್ನಾಟಕದ ಕೆಲವು ಭಾಗಗಳು ಮದ್ರಾಸ್‌ನ ಆಧಿಪತ್ಯಕ್ಕೆ ಸೇರಿದ್ದವು. ಅಂದು ಕನ್ನಡಿಗರು ಉನ್ನತ ಶಿಕ್ಷಣಕ್ಕೆ ಮದ್ರಾಸ್‌ಗೆ ಹೋಗಬೇಕಾಗುತಿತ್ತು. ಮದ್ರಾಸ್ ವಿವಿ ನಮ್ಮ ದೇಶದ ಪ್ರಮುಖ ವಿವಿಗಳಲ್ಲಿ ಒಂದು. ಅಲ್ಲಿನ ಕನ್ನಡ ವಿಭಾಗವೂ ತುಂಬ ಪ್ರಸಿದ್ಧವಾದುದು. ಆರ್ ನರಸಿಂಹಾಚಾರ್ಯರು ಅಲ್ಲಿನ ಮೊದಲ ವಿದ್ಯಾರ್ಥಿ. ಕನ್ನಡ ವಿದ್ವಾಂಸರಲ್ಲಿ ಅನೇಕರು ಮದ್ರಾಸ್ ವಿವಿಯವರು. ಮರಿಯಪ್ಪ ಭಟ್ಟ, ಕುಶಾಲಪ್ಪ ಗೌಡ, ಅರ್ತಿಕಜೆ ಮೊದಲಾದವರು ಮದ್ರಾಸಿನಲ್ಲಿ ಕನ್ನಡದ ಶಕ್ತಿಯಾಗಿ ದುಡಿದವರು. ಮದ್ರಾಸ್ ವಿವಿ ಕನ್ನಡ ವಿಭಾಗದ ಪ್ರಕಟಣೆಗಳು ಗುಣಮಟ್ಟದಲ್ಲಿ ಉತ್ಕೃಷ್ಟವಾದವು. ಇಂದಿಗೂ ಮದ್ರಾಸಿನಲ್ಲಿ ಅನೇಕ ಕನ್ನಡ ಸಂಘಟನೆಗಳಿದ್ದು ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು ಅಲ್ಲಿ ನೆಲೆಸಿರುವ ಕನ್ನಡಿಗರನ್ನು ಸಂಘಟಿಸುವಲ್ಲಿ ಯಶಸ್ವಿಯಾಗಿದೆ. ಅಯನಾವರಂ ಕರ್ನಾಟಕ ಸಂಘ, ಮದರಾಸು ಕನ್ನಡ ಬಳಗ, ಕನ್ನಡಿಗರ ಕೂಟ ಟಿ. ನಗರ ಕರ್ನಾಟಕ ಸಂಘ, ಕಸಾಪ ತಮಿಳುನಾಡು ಘಟಕ ಮೊದಲಾದ ಸಂಘ, ಸಂಸ್ಥೆಗಳು ಕನ್ನಡ ಸಂಸ್ಕೃತಿಯ ಉಳಿವಿಗೆ ಶಕ್ತಿಮೀರಿ ಪ್ರಯತ್ನಿಸುತ್ತಿವೆ. ಟಿ. ನಗರದ ಕರ್ನಾಟಕ ಸಂಘವು ತನ್ನದೇ ಆದ ಭವ್ಯ ಭವನವನ್ನು ಹೊಂದಿದ್ದು ಶಾಲೆ ಹಾಗೂ ಗ್ರಂಥಾಲಯಗಳನ್ನು ನಡೆಸಿಕೊಂಡು ಬರುತ್ತಿದೆ. ಕನ್ನಡ ಬಳಗವು ಪ್ರಕಟಿಸುವ 'ಲಹರಿ' ಮಾಸ ಪತ್ರಿಕೆಯು ಮದರಾಸಿನಲ್ಲಿ ನೆಲೆಸಿರುವ ಕನ್ನಡಿಗರ ಸಾಹಿತ್ಯ ಚಟುವಟಿಕೆಗೆ ಒಳ್ಳೆಯ ನಿದರ್ಶನ.

ತಮಿಳುನಾಡಿನ ಮಧುರೈಯಲ್ಲಿಯೂ ಕನ್ನಡಿಗರು ಸಂಘಟಿತರಾಗಿದ್ದಾರೆ. ಮಧುರೈನ ಕಾಮರಾಜ ವಿವಿಯಲ್ಲಿ ಕನ್ನಡ ವಿಭಾಗವಿದ್ದು ಕನ್ನಡ ಎಂ.ಎ., ಎಂ.ಫಿಲ್, ಪಿ. ಎಚ್. ಡಿ. ಅಧ್ಯಯನಕ್ಕೂ ಅವಕಾಶವಿದೆ. ಪಾ. ಶ. ಶ್ರೀನಿವಾಸ, ಕುಲಕರ್ಣಿ, ಹರಿಕೃಷ್ಣ ಭರಣ್ಯ ಮೊದಲಾದ ವಿದ್ವಾಂಸರು ಇಲ್ಲಿ ಕನ್ನಡವನ್ನು ಕಟ್ಟುವ ಕಾರ್ಯವನ್ನು ಮಾಡುತ್ತಾ ಬಂದರು. 1960ರಲ್ಲಿ ಆರಂಭವಾದ ಮಧುರೈ ಕರ್ನಾಟಕ ಸಂಘ ಸಾಕಷ್ಟು ಹುಮ್ಮಸ್ಸಿನಿಂದ ಕನ್ನಡ ಪರ ಚಟುವಟಿಕೆಯಲ್ಲಿ ತೊಡಗಿಕೊಂಡಿದೆ.

ಪುಣೆ ಮಹಾರಾಷ್ಟ್ರದ ಸಾಂಸ್ಕೃತಿಕ ರಾಜಧಾನಿ ಎಂಬ ಖ್ಯಾತಿಗೆ ಭಾಜನವಾಗಿದೆ. ಪುಣೆ ಎಂದ ತಕ್ಷಣ ನಮಗೆ ನೆನಪಾಗುವುದು ಅಲ್ಲಿನ ಬಾಲಭಾರತಿಯ ಪಠ್ಯಪುಸ್ತಕ ವಿಭಾಗ. ವಿಭಾಗ ಕೃ. ಶಿ. ಹೆಗಡೆ ಅವರು ಉತ್ತಮ ಕನ್ನಡ ಪಠ್ಯಪುಸ್ತಕಗಳನ್ನು ಹೊರತರಲು ಹೆಣಗಿದ್ದಾರೆ. ಅವರ ಉಸ್ತುವಾರಿಯಲ್ಲಿ, ನಡೆಯುತ್ತಿರುವ ಕನ್ನಡ ಮರಾಠಿ 'ಸ್ನೇಹವರ್ಧನ ಕೇಂದ್ರ' ಸ್ನೇಹ ಸೇತುವಾಗಿ ಕನ್ನಡಿಗರನ್ನು ಮರಾಠಿಗರನ್ನು ಬೆಸೆಯುವ ಕೆಲಸದಲ್ಲಿ ನಿರತವಾಗಿದೆ. ಇಲ್ಲಿನ ಕರ್ನಾಟಕ ಸಂಘ ಗ್ರಂಥಾಲಯ ಹಾಗೂ ಶಾಲೆಗಳನ್ನು ನಡೆಸುತ್ತಿದೆ. ಮಹಾರಾಷ್ಟ್ರ ಸರಕಾರದ ಎಸ್‌ಎಸ್‌ಸಿ, ಪಿಯುಸಿ (ಎಚ್.ಎಸ್.ಸಿ) ಕನ್ನಡ ಪಠ್ಯಪುಸ್ತಕಗಳನ್ನು ಹೊರತರುವುದರ ಮೂಲಕ ಕನ್ನಡ ವಿದ್ಯಾರ್ಥಿಗಳು ತಮ್ಮ ಮಾತೃ ಭಾಷೆಯಲ್ಲಿ ಓದಲು ಅವಕಾಶಮಾಡಿಕೊಟ್ಟಿದೆ. ಮಹಾರಾಷ್ಟ್ರಭೂಷಣ ಪ್ರಶಸ್ತಿಯನ್ನು ಪಡೆದಿರುವ ಕನ್ನಡಿಗ ಸಂಗೀತಗಾರ, ಗಾಯಕ ಭೀಮಸೇನ ಜೋಶಿ, ಅನುವಾದದಲ್ಲಿ ಹೆಸರು ಮಾಡಿರುವ ಉಮಾಕುಲಕರ್ಣಿ, ಮೀನಾವಾಂಗೀಕರ್ ಮೊದಲಾದವರು ಪುಣೆಯಲ್ಲಿ ನೆಲಸಿದ್ದಾರೆ. ಮೀರಜ್, ಸಾಂಗ್ಲಿಯಲ್ಲಿಯೂ ಕನ್ನಡಿಗರು ಸಂಘಟಿತರಾಗಿದ್ದಾರೆ.

ಭಾರತದ ರಾಜಧಾನಿಯಾದ ದೆಹಲಿಯಲ್ಲಿಯೂ ಕನ್ನಡಿಗರು ತಮ್ಮ ನಾನಾ ಚಟುವಟಿಕೆಗಳ ಮೂಲಕ ಗಮನ ಸೆಳೆದಿದ್ದಾರೆ. ದೆಹಲಿ ಕರ್ನಾಟಕ ಸಂಘ ಭವ್ಯವಾದ ಕಟ್ಟಡವನ್ನು ಹೊಂದಿದ್ದು ಅನೇಕ ಕನ್ನಡ ಚಟುವಟಿಕೆಗಳ ಮೂಲಕ ಮನೆ ಮಾತಾಗಿದೆ. ಅದರ ಮುಖವಾಣಿ 'ಅಭಿಮತವು' ಸ್ಥಳೀಯ ಪ್ರತಿಭೆಗಳಿಗೆ ಪ್ರೋತ್ಸಾಹವನ್ನು ನೀಡುತ್ತಿದೆ. ಸದ್ಯ ದೆಹಲಿ ಕರ್ನಾಟಕದ ಅಧ್ಯಕ್ಷರಾಗಿ ಜಾನಪದ ವಿದ್ವಾಂಸ, ಪುರುಷೋತ್ತಮ ಬಿಳಿಮಲೆಯವರು ಉತ್ಸಾಹದಿಂದ ಕೆಲಸಮಾಡುತ್ತಿರುವುದು ಆಶಾದಾಯಕ ಸಂಗತಿ. ದೆಹಲಿ ಕನ್ನಡಿಗ ಪತ್ರಿಕೆಯು ಕಳೆದ ಅನೇಕ ವರ್ಷಗಳಿಂದ ಹೊರನಾಡಿನಲ್ಲಿ ಕನ್ನಡ ಸಮ್ಮೇಳನಗಳನ್ನು

ಆಯೋಜಿಸುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಡಾ. ಸಾಮಗ ಅವರ ಸಾಧನೆ ಅನುಕರಣೀಯ ಅರಾವಳಿ ಕನ್ನಡ ಸಂಘ, ದೆಹಲಿ ಕನ್ನಡ ಸಂಘ, ಕನ್ನಡ ಭಾರತಿ, ಕರ್ನಾಟಕ ಲೇಡಿಸ್ ಕ್ಲಬ್ ಮೊದಲಾದ ಸಂಘಟನೆಗಳು ಸಹ ಸಾಂಸ್ಕೃತಿಯ ಚಟುವಟಿಕೆಗಳ ಮೂಲಕ ದೆಹಲಿಯಲ್ಲಿ ಕನ್ನಡದ ಕಂಪನ್ನು ಸೂಸುತ್ತಿವೆ. ದೆಹಲಿ ವಿಶ್ವವಿದ್ಯಾಲಯದ ಆಧುನಿಕ ಭಾರತೀಯ ಭಾಷಾವಿಭಾಗದಲ್ಲಿ ಕನ್ನಡ ಅಧ್ಯಯನಕ್ಕೂ ಅವಕಾಶವಿದೆ. ಟಿ. ಎಸ್. ಸತ್ಯನಾಥ್. ಎಚ್. ಎಸ್. ಶಿವಪ್ರಕಾಶ್, ಮೊದಲಾದವರು ದೆಹಲಿಯಲ್ಲಿ ನೆಲೆಸಿ ಕನ್ನಡ ಸಾಹಿತ್ಯದ ಕೃಷಿಯಲ್ಲಿ ನಿರತರಾಗಿದ್ದಾರೆ. ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಕನ್ನಡವನ್ನು ಉಳಿಸಿಬೆಳೆಸುವ ಪ್ರಯತ್ನ ಇನ್ನಷ್ಟು ತೀವ್ರವಾಗಬೇಕು. ಈ ನಿಟ್ಟಿನಲ್ಲಿ ಕರ್ನಾಟಕದಿಂದ ಚುನಾಯಿತರಾಗಿ ಹೋಗುವ ವಿವಿಧ ಪಕ್ಷಗಳ ಸದಸ್ಯರೂ ಸರಿಯಾಗಿ ಸ್ಪಂದಿಸಬೇಕು. ಕರ್ನಾಟಕದ ನೆರೆಯ ರಾಜ್ಯವಾದ ಗೋವಾದ ಪಣಜಿ, ವಾಸ್ಕೊ, ಮಡಗಾಂ ಮೊದಲಾದ ಕಡೆಗಳಲ್ಲಿ ಕನ್ನಡಿಗರು ದೊಡ್ಡ ಪ್ರಮಾಣದಲ್ಲಿ ನೆಲೆಸಿದ್ದು ಕನ್ನಡ ಪರವಾದ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ, 'ಗೋವಾ ದರ್ಪಣ' ಮಾಸ ಪತ್ರಿಕೆ ಈ ಭಾಗದ ಕನ್ನಡಿಗರ ನಡಾವಳಿಗಳನ್ನು ಚೆನ್ನಾಗಿ ದಾಖಲಿಸುತ್ತಿದೆ. ದೂರದ ಗುಜರಾತಿನ ವಾಪಿಯಲ್ಲಿ ಕನ್ನಡಿಗರ ಸಂಖ್ಯೆ ಸುಮಾರು ಸಾವಿರವನ್ನು ದಾಟುವುದಿಲ್ಲ. ಆದರೂ ಅಲ್ಲಿನ ಕನ್ನಡಿಗರ ಸಾಹಸ ಸಾಧನೆ ನಾಡಿಗೇ ಮಾದರಿಯಾಗಿದೆ. ಇತ್ತೀಚೆಗಷ್ಟೇ ಬೆಳ್ಳಿಹಬ್ಬವನ್ನು ಆಚರಿಸಿರುವ 'ವಾಪಿ ಕನ್ನಡ ಸಂಘ' ತನ್ನದೇ ಆದ ಸುಸಜ್ಜಿತ ಸಭಾಗೃಹವನ್ನು ಹೊಂದಿದ್ದು ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

'ಎತ್ತಣ ಕಾಶಿ ಎತ್ತಣ ಕರ್ನಾಟಕ' ಎಂದು ಯಾರಾದರೂ ಪ್ರಶ್ನಿಸಬಹುದು. ಆದರೆ ಕಾಶಿಯಲ್ಲಿಯೂ ಕನ್ನಡದ ಕಲರವ ಕೇಳಿಬರುತ್ತಿದೆ. ಇಲ್ಲಿನ ಪ್ರಸಿದ್ಧ ಜಂಗಮವಾಡಿಮಠ ಕನ್ನಡ ವಚನಕಾರರ ಪರಂಪರೆಯನ್ನು ಅವರ ಸಂದೇಶವನ್ನು ಅನುಸರಿಸಿಕೊಂಡು ಬಂದಿದೆ. ಬನಾರಸ್ ಹಿಂದೂ ವಿವಿಯಲ್ಲಿ ಡಾ. ವಿ. ಶಿವಾನಂದ ಅವರು ಕನ್ನಡ ವಿಭಾಗವನ್ನು ಕಟ್ಟಿ ಬೆಳೆಸಿದ ರೀತಿಗೆ ಯಾರೂ ಬೆರಗಾಗಬೇಕು. ಪ್ರಕಟಣೆಗಳ ಮೂಲಕ, ಸಂಶೋಧನ ಯೋಜನೆಗಳ ಮೂಲಕ ಉತ್ತರದಲ್ಲಿ ಪ್ರಾಚೀನ ಕರ್ನಾಟಕದ ಕುರುಹುಗಳನ್ನು ಅವರು ಲೋಕ ಮುಖಕ್ಕೆ ಪರಿಚಯಿಸಿದ್ದಾರೆ. ಅವರ ನಿಧನದ ಅನಂತರ ಹೊಸ ನೇಮಕಾತಿಯಾಗದೆ ಅಲ್ಲಿ ಕನ್ನಡ ಅಧ್ಯಯನ ನಿರತ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಕರ್ನಾಟಕ ಸರಕಾರ ಕಾಶಿಯಲ್ಲಿ ಕನ್ನಡ ಉಳಿಯುವಂತೆ ನೋಡಿಕೊಳ್ಳಬೇಕು. ಹೊರನಾಡಲ್ಲಿ ಕನ್ನಡ ಉಳಿದಾಗ ಮಾತ್ರ ಕನ್ನಡಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಸಿಗುತ್ತದೆ. ಕನ್ನಡದ ನೆಲೆಗಳನ್ನು ವಿಸ್ತರಿಸುವ ಕೆಲಸವನ್ನು ಸರಕಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ತುರ್ತಾಗಿ ಮಾಡಬೇಕಾಗಿದೆ.

ಆಂಧ್ರ ಪ್ರದೇಶದಲ್ಲಿಯೂ ಕನ್ನಡ ಅಧ್ಯಯನಕ್ಕೆ ಅವಕಾಶವಿದೆ. ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ವಿಭಾಗವಿದ್ದು ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿಯ ಉಳಿವಿಗೆ ಶ್ರಮಿಸುತ್ತಿದೆ. ಉತ್ತರ ಕರ್ನಾಟಕ ಅನೇಕ ಮಂದಿ ವಿದ್ವಾಂಸರಿಗೆ ಇದು ಒಂದು ಕಾಲದಲ್ಲಿ ಗರಡಿ ಮನೆಯಾಗಿತ್ತು. ಸದ್ಯ ಉಸ್ಮಾನಿಯಾ ವಿ ವಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಡಾ. ನಾರಾಯಣ ಪ್ರಸಾದ್ ಸೇವೆಸಲ್ಲಿಸುತ್ತಿದ್ದಾರೆ. ಆಂಧ್ರ ಪ್ರದೇಶದ ಅನಂತಪುರದ ಎಸ್. ಕೆ. ವಿವಿಯಲ್ಲಿ ಕನ್ನಡ ಅಧ್ಯಯನಕ್ಕೆ ಅವಕಾಶವಿದ್ದು, ಇತ್ತೀಚೆಗಷ್ಟೇ ಕುಪ್ಪಂನಲ್ಲಿ ಆರಂಭವಾದ ದ್ರಾವಿಡ ವಿವಿಯಲ್ಲಿ ಕನ್ನಡ ಸಂಶೋಧನೆ ಅನುವಾದ ಹಾಗೂ ತೌಲನಿಕ ಅಧ್ಯಯನಕ್ಕೂ ಅವಕಾಶ ಕಲ್ಪಿಸಲಾಗಿದೆ. ಸದ್ಯ ಇಲ್ಲಿ ಕನ್ನಡ ವಿಭಾಗದ ಜವಾಬ್ದಾರಿಯನ್ನು ಡಾ. ಶೇಷಶಾಸ್ತ್ರಿ ಅವರು ವಹಿಸಿಕೊಂಡಿದ್ದಾರೆ. ಹೈದರಾಬಾದ್ ನಲ್ಲಿದ್ದುಕೊಂಡು ಕನ್ನಡ ಕಾವ್ಯವನ್ನು ಶ್ರೀಮಂತಗೊಳಿಸಿದ ಕವಿ ಚಿಂತಕ ಕೆ. ವಿ. ತಿರುಮಲೇಶ್ ಅವರ ಸಾಧನೆ ಉಲ್ಲೇಖನೀಯ ಸಂಗತಿ. ಹಿರಿಯ ವಿದ್ವಾಂಸ ಸಂಶೋಧಕ ಡಿ. ಕೆ. ಭೀಮಸೇನರಾವ್ ಅವರು ಹೈದರಾಬಾದ್‌ನಲ್ಲಿದ್ದರು. ಮಹಾರಾಷ್ಟ್ರದ ಕೊಲ್ಹಾಪುರದಲ್ಲಿದ್ದುಕೊಂಡು ಕನ್ನಡ ಸಂಸ್ಕೃತಿಯನ್ನು ಬೆಳಗಿದ ಉತ್ತರ ಕರ್ನಾಟಕದ ಅನೇಕ ವಿದ್ವಾಂಸರನ್ನು ಕನ್ನಡದ ಕಾಯಕಕ್ಕೆ ಇಳಿಸಿದ ಪ್ರೊ. ಕೆ. ಜಿ. ಕುಂದಣಗಾರ, ಕರ್ನಾಟಕವೂ ಸೇರಿದಂತೆ ಭಾರತದ ಜೈನ ಸಾಹಿತ್ಯ ಸಂಸ್ಕೃತಿಯ ಕುರಿತು ಮಹತ್ವದ ಸಂಶೋಧನೆಗಳನ್ನು ಕೈಗೊಂಡು ಪ್ರೊ. ಆ. ನೇ. ಉಪಾಧ್ಯೆ ಅವರ ಸಾಧನೆ ನಾಡಿಗೆ ಮಾದರಿಯಾಗಿದೆ. ಕನ್ನಡದ ಕೆಲಸವಾಡಲು ಎಲ್ಲಿದ್ದರೂ ಹೇಗಿದ್ದರೂ ತೊಂದರೆಯಾಗದು ಎಂಬುದನ್ನು ಇವರು ತೋರಿಸಿ ಕೊಟ್ಟಿದ್ದಾರೆ. ಹೊರನಾಡ ಕನ್ನಡ ಸಾಹಿತಿಗಳು ಕನ್ನಡ ವಾಙ್ಮಯಕ್ಕೆ ಹೊಸ ಆಯಾಮ ನೀಡಿದ್ದೂ ಇಲ್ಲಿ ಸ್ಮರಣೀಯ ಸಂಗತಿ.

ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ವಿ. ಕೃ. ಗೋಕಾಕ, ವಿಮರ್ಶಕ ಕೀರ್ತಿನಾಥ ಕುರ್ತಕೋಟಿ ಜಿ. ಎಸ್. ಆಮೂರ, ಕತೆಗಾರ ಎಸ್ ದಿವಾಕರ್, ಜಯಂತ ಕಾಯ್ಕಿಣಿ, ಕೆ. ಚಂದ್ರಮೌಳಿ, ಶಿಕ್ಷಣತಜ್ಞ ಜೆ. ಪಿ. ನಾಯಕ್ ಮೊದಲಾದವರು ಅಖಿಲಭಾರತ ಮಟ್ಟದಲ್ಲಿ ಕನ್ನಡ ಭಾಷೆಯ ಮಾನ ಸಮ್ಮಾನಗಳನ್ನು ಹೆಚ್ಚಿಸಿದ್ದಾರೆ. ಇವರೆಲ್ಲ ಹೊರನಾಡ ಕನ್ನಡಿಗರಾಗಿದ್ದರು ಎಂಬುದನ್ನು ಯಾರೂ ಮರೆಯುವಂತಿಲ್ಲ. ಹೊರನಾಡ ಕನ್ನಡಿಗರು ಸಾಂಸ್ಕೃತಿಕ ರಾಯಭಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದು ಮಹತ್ವದ ಸಂಗತಿ. ತಮ್ಮ ನಾಡುನುಡಿ ಸಂಸ್ಕೃತಿಯಿಂದ ದೂರ ಇರುವ ಅವರಿಗೆ ವಿಶೇಷ ಅಭಿಮಾನವಿರುವುದು ಸಹಜವಾಗಿದೆ. ಪರಭಾಷೆಯ ಜಗತ್ತಿನಲ್ಲಿ ತಾವೆಲ್ಲಿ ಕಳೆದು ಹೋಗುತ್ತೇವೋ ಎಂಬ ಭಯವೂ ಅವರನ್ನು ಕಾಡುವುದುಂಟು. ಹೀಗಾಗಿ ಹೊರನಾಡಿನಲ್ಲಿ ನೆಲೆಸಿರುವ ಕನ್ನಡಿಗರು ತಾವಿರುವಲ್ಲೇ ಒಂದೊಂದು ಸಂಘಗಳನ್ನು ಸ್ಥಾಪಿಸಿಕೊಂಡು ತಮ್ಮತನವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಹೊಸತಲೆಮಾರು ಯಾ ಹೊರನಾಡಿನಲ್ಲಿ ಹುಟ್ಟಿದ ಮಕ್ಕಳು ಇತ್ತೀಚೆಗೆ ಕನ್ನಡದಿಂದ ದೂರವಾಗುತ್ತಿರುವುದು ವಾಸ್ತವ ಸಂಗತಿಯೇ ಆಗಿದೆ. ಕನ್ನಡ ಕಲಿಯಲು ಕನ್ನಡದಲ್ಲಿ ಶಿಕ್ಷಣ ಪಡೆಯಲು ಎಲ್ಲೆಡೆ ಅವಕಾಶಗಳಿಲ್ಲ. ಹೀಗಾಗಿ ಕನ್ನಡ ಸಂಘ ಸಂಸ್ಥೆಗಳು ಕನ್ನಡ ಕಲಿಸುವ ತರಗತಿಗಳನ್ನು ಅಲ್ಲಲ್ಲಿ ನಡೆಸುತ್ತಿರುವುದು ಹೊಸ ಬೆಳವಣಿಗೆಯೇ ಆಗಿದೆ. ಒಂದು ಭಾಷೆ ಬೆಳೆಯಬೇಕಾದರೆ, ಆ ಭಾಷೆಯನ್ನಾಡುವ ಜನರು ಮನಸ್ಸುಮಾಡಬೇಕು. ಭಾಷೆಯನ್ನು ಉಪಯೋಗಿಸುವ ಕಡೆಗಳಲೆಲ್ಲ ತಮ್ಮ ಭಾಷೆಯನ್ನು ಬಳಸಬೇಕು. ಶಿಕ್ಷಣದಲ್ಲಿ, ಕೋರ್ಟು ಕಛೇರಿಗಳಲ್ಲಿ, ಸಾರ್ವಜನಿಕ ಜೀವನದಲ್ಲಿ, ದಿನಬಳಕೆಯಲ್ಲಿ ಎಲ್ಲ ಕಡೆಗೂ ಅದೇ ಭಾಷೆ ಬಳಕೆಯಲ್ಲಿ ಬರಬೇಕು. ಎರಡು ದೃಷ್ಟಿಯಿಂದ ಭಾಷೆಯ ಉಪಯೋಗವಾಗುತ್ತದೆ. ಮೊದಲನೆಯದು ಅಗತ್ಯ ಎರಡನೆಯದು ಗೌರವ ಎಂದು ಹಾಮಾನ ಅವರು ಹೇಳಿದ್ದುಂಟು. ಹೊರನಾಡ ಕನ್ನಡಿಗರು ಶಕ್ತಿಮೀರಿ ತಮ್ಮ ಮಾತೃಭಾಷೆಯ ಉಳಿವಿಗೆ ಶ್ರಮಿಸುತ್ತಾ ಬಂದಿರುವುದಕ್ಕೆ ನಾಡಿನಾದ್ಯಂತ ತಲೆ ಎತ್ತಿ ನಿಂತಿರುವ ಸಂಘಸಂಸ್ಥೆಗಳೇ ಸಾಕ್ಷಿ.

ಹೊರನಾಡ ಕನ್ನಡಿಗರು ಹಣದ ಹೊಳೆಯನ್ನೇ ಕರ್ನಾಟಕಕ್ಕೆ ಹರಿಸಿದ್ದಾರೆ. ಹೀಗಾಗಿ ಕರ್ನಾಟಕದ ಅಭಿವೃದ್ಧಿಯಲ್ಲಿ ಇವರ ಪಾಲೂ ಇದೆ. ಮಹಾರಾಷ್ಟ್ರದಲ್ಲಿ ಸುಮಾರು ಇಪ್ಪತ್ತೈದು ಸಾವಿರ ಹೋಟೇಲುಗಳು ಕನ್ನಡಿಗರದಾಗಿವೆ. ಹೈದರಾಬಾದ್, ಚೆನ್ನೈ, ಗೋವಾ ಹೀಗೆ ಭಾರತದ ಎಲ್ಲೆಡೆ 'ಉಡುಪಿ' ಹೋಟೇಲುಗಳು ಜನಪ್ರಿಯವಾಗಿವೆ. ಸುಮಾರು ಐದು ಆರು ಲಕ್ಷ ಕನ್ನಡಿಗರು ಹೋಟೇಲ್ ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಒಂದು ಸಣ್ಣ ಲೆಕ್ಕಚಾರ, ಒಬ್ಬ ಹೋಟೇಲ್ ಕಾರ್ಮಿಕ ಪ್ರತಿ ತಿಂಗಳು ತನ್ನ ಊರಿಗೆ ಎರಡು ಸಾವಿರ ರೂಪಾಯಿಗಳನ್ನು ಕಳುಹಿಸುತ್ತಾನೆ ಎಂದಿಟ್ಟುಕೊಳ್ಳಿ. ಸುಮಾರು ಐದು ಲಕ್ಷ ಕನ್ನಡಿಗರು ಒಂದು ತಿಂಗಳಿಗೆ ತಮ್ಮ ಮನೆ ಕಳುಹಿಸುವ ಹಣ 1000 ಕೋಟಿ ಅಂದರೆ ವರ್ಷಕ್ಕೆ 12,000 ಕೋಟಿ ಹಣ ಹೊರನಾಡ ಕನ್ನಡಿಗರಿಂದ ಕರ್ನಾಟಕ್ಕೆ ಸಂದಾಯವಾದಂತಾಯಿತು. ಕನ್ನಡ ಸಾಹಿತ್ಯದಲ್ಲಿ ಕೃಷಿ ಮಾಡಿರುವ ಹೋಟೆಲ್ ಉದ್ಯಮಿ ರತ್ನಾಕರ ಶೆಟ್ಟಿಯವರು ಈ ಕುರಿತು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ.

"ಮುಂಬಯಿಯ ಸಣ್ಣ ದೊಡ್ಡ ಪ್ರಮಾಣದ ಕಛೇರಿ, ಉದ್ದಿಮೆ ಕಾರ್ಖಾನೆಗಳಲ್ಲಿಯ ಕಾರ್ಮಿಕರಿಗೆ ಆಹಾರ ಪೂರೈಸಲು ಇಂಡಸ್ಟ್ರಿಯಲ್ ಕ್ಯಾಟರಿಂಗ್ ವ್ಯವಸ್ಥೆಯೂ ಹೆಚ್ಚಿನಂಶ ದಕ್ಷಿಣ ಕನ್ನಡಿಗರದೇ ಆಗಿದೆ. ಮುಂಬಯಿಯಲ್ಲಿ ಹಸಿದ ಹೊಟ್ಟೆಗೆ

ಶತಮಾನ ಕಾಲದಿಂದಲೂ ಅನ್ನನೀರು ನೀಡುವ ಕಾಯಕದಲ್ಲಿ ಕನ್ನಡಿಗರ ಕೈ ಈಗಲೂ ಮೇಲೆಯೇ ಇದೆ. ಹೋಟೆಲಿಗರು ಶ್ರಮಗಾರರು, ದಿನಕ್ಕೆ ಹದಿನೆಂಟು ಗಂಟೆ ಸತತ ದುಡಿಯಬಲ್ಲರು. ದುಡಿತಕ್ಕೆ ಸಿಕ್ಕ ಫಲವನ್ನು ತಾನು ಅನುಭೋಗಿಸುತ್ತಿದ್ದಂತೆ, ತನ್ನ ಹುಟ್ಟೂರಿಗೂ ಕಳುಹಿಸುವುದನ್ನು ಮರೆಯಲಿಲ್ಲ. ಅಲ್ಲಿಯ ಶಾಲೆ, ದೇವಸ್ಥಾನ, ದೈವಸ್ಥಾನ ಏನೇ ಇರಲಿ ಹೊಸತು ಕಟ್ಟುವುದಿದ್ದರೂ ಹಳೆಯದಾದುದನ್ನು ಜೀರ್ಣೋದ್ಧಾರ ಮಾಡುವುದಿದ್ದರೂ ಮುಂಬಯಿಯ ಹೋಟೇಲಿಗರ ನೆರವಿಲ್ಲದೆ ಸಾಧ್ಯವಾಗಿಲ್ಲ; ಸಿಂಹಪಾಲಿನ ಖರ್ಚು ಅಂದಿನಿಂದಲೂ ಇವರದ್ದೇ'' (ಹೊರನಾಡ ಕನ್ನಡ ಸಂಸ್ಕೃತಿ ಸಮಾವೇಶ ವಿಶೇಷಾಂಕ. ಮುಂಬೈ 2004 ಪುಟ 31) ಕನ್ನಡಿಗರು ಇತರ ಉದ್ಯಮಗಳನ್ನು ಸ್ಥಾಪಿಸಿ ಹೆಸರುಮಾಡಿದ್ದಾರೆ. ಈ ಕುರಿತು ಹೊರನಾಡ ಸಂಗಾತಿಯ ನಿರ್ದೇಶಕ ನಾರಾಯಣ ಪ್ರಸಾದ್ ಹೀಗೆ ಮಾಹಿತಿ ಸಂಗ್ರಹಿಸಿದ್ದಾರೆ.

''ಹೊರನಾಡ ಕನ್ನಡಿಗರ ಸಾಧನೆಗಳಿಗೆ ಕನ್ನಡಿಗ ಮಾಡದ ಕೆಲಸವಿಲ್ಲ; ಕನ್ನಡಿಗ ಮಾಡದ ಕಾರ್ಯವಿಲ್ಲ ಎನ್ನಬಹುದು. ಮುಂಬಯಿಯ ವ್ಯಾವಹಾರಿಕ ಕಟ್ಟಡವೊಂದಕ್ಕೆ ಭೇಟಿ ನೀಡಿ, ಒಳಗಡೆ ಕ್ಯಾಂಟೀನ್ ಕನ್ನಡಗರದ್ದಾಗಿದೆ, ಇಲ್ಲವೇ ಮೆನೇಜರ್ ಕನ್ನಡಿಗನಾಗಿದ್ದಾನೆ. ವಿಶ್ವಬ್ಯಾಂಕ್ ಇರಲಿ, ರಿಸರ್ವ್ ಬ್ಯಾಂಕ್ ಆದಾಗಿರಲಿ, ಕನ್ನಡದ ಪ್ರಾಧಾನ್ಯತೆ ಹೇಳಕೂಡದು. 'ರಿಖಿ' ಟಿ.ವಿ.ಯ ಸಂಪಾದಕ ಕನ್ನಡಿಗ, ಲತಾ ಮಂಗೇಶ್ಕರ್ ಅವರ ತೆರಿಗೆ ಸಲಹೆಗಾರ ಕನ್ನಡಿಗ, ಬಾಳಾ ಸಾಹೇಬ ಠಾಕ್ರೆಯವರ ನ್ಯಾಯವಾದಿ ಸತೀಶ್ ಮಾನೆಶಿಂದೆ ಅಪ್ಪಟ ಕನ್ನಡದವರು. ಸಚಿನ್ ತೆಂಡೂಲ್ಕರ್‌ರವರ ವರ್ಚಸ್ಸನ್ನು 100 ಕೋಟಿ ರೂಪಾಯಿಗೆ ಖರೀದಿಸಿದ 'ವರ್ಲ್ಡ್‌ಟೆಲ್'ನ ಮುಖ್ಯಸ್ಥ ಕನ್ನಡಿಗ, ಪ್ರಪಂಚದ ಪ್ರಪ್ರಥಮ 'Free E-mail' 'Hot mail' ಸ್ಥಾಪಿಸಿ '40 ಕೋಟಿ ಡಾಲರ್‌ಗಳಿಗೆ ಬಿಲ್ ಗೇಟ್ಸ್‌ಗೆ ಮಾರಿದ ಸಬೀರ್ ಭಾಟೀಯ ಬೆಂಗಳೂರು ಹುಡುಗ. ಅಹಮದಾಬಾದಿನ IIMನಲ್ಲಿ ತಂತ್ರಜ್ಞಾನದ ಅಧ್ಯಾಪಕ, ತನ್ನ ಬುದ್ಧಿವಂತಿಕೆಯಿಂದ ಇನ್‌ಫೋಸಿಸ್ ಸಂಸ್ಥೆಯನ್ನು ಸ್ಥಾಪಿಸಿ ಕರ್ನಾಟಕದ ಸ್ಥಿತಿಯನ್ನು ಬದಲಿಸಿದರು. ಅವರ ಜೊತೆಗಾರ ನಂದನ್ ನೀಲಕಣಿ ಮುಂಬಯಿಯ ಸಾಕಿನಾಕಾದ 'PCS' ಕಂಪ್ಯೂಟರ್ ಸಂಸ್ಥೆಯಲ್ಲಿ ಇಂಜಿನಿಯರ್ ಆಗಿದ್ದರು. ಈ ಇಬ್ಬರು ಹೊರನಾಡ ಕನ್ನಡಿಗರು ಪ್ರಸ್ತುತ ಕನಾಟಕವನ್ನು ಜಾಗತಿಕ ನಕಾಶೆಗೆ ಪರಿಚಯಿಸಿ ಕೊಟ್ಟರು'' ಎಂಬುದಾಗಿ ಹೊರನಾಡ ಕನ್ನಡಿಗರ ಹಠ ಸಾಹಸವನ್ನು ದಾಖಲಿಸಿದ್ದಾರೆ. ಕರ್ನಾಟಕದ ಹೊರಗಡೆಯ ಹೊರನಾಡ ಕನ್ನಡಿಗ ಹೆಚ್ಚು ಅವಕಾಶವಂತ. ತನ್ನ ಅವಕಾಶಗಳನ್ನು ತಾನೇ ಸೃಷ್ಟಿಸಬಲ್ಲ. ತನ್ನ ಅದೃಷ್ಟ ಬದಲಾಯಿಸಬಲ್ಲ ಅದೃಷ್ಟಶಾಲಿ ! ಜೊತೆಗೆ ತನ್ನ ಹುಟ್ಟೂರ ಅಭಿವೃದ್ಧಿಗೂ ನಿರ್ಣಾಯಕನಾಗಬಲ್ಲರು'' ಎಂಬ ಅವರ ಮಾತಿನಲ್ಲಿ ತಥ್ಯವಿದೆ.

ಹೊರನಾಡ ಕನ್ನಡಿಗರ ಸಾಹಸ ಸಾಧನೆ ಇಷ್ಟೇ ಸೀಮಿತಗೊಳ್ಳಲಿಲ್ಲ. ಇವರು ಶಾಲೆ, ಕಾಲೇಜ್, ಬ್ಯಾಂಕ್, ಇತ್ಯಾದಿಗಳನ್ನು ರಚಿಸಿ ಸಮಾಜ ಸೇವೆಯಲ್ಲಿ ನಿರತರಾದರು. ತಮ್ಮದೇ ಆದ ಜಾಗವನ್ನು ಪಡೆದುಕೊಂಡು ಅಲ್ಲಿ ಕಟ್ಟಡಗಳನ್ನು ಕಟ್ಟಿದರು. ಎಲ್ಲಕ್ಕಿಂತ ಮುಖ್ಯವಾಗಿ, ಹೊರನಾಡಿನಲ್ಲಿ ಕನ್ನಡಿಗರು ಇವೆಲ್ಲವನ್ನು ತಮ್ಮ ಬಲದಿಂದಲೇ ಸಾಧಿಸಿದರು ಎಂಬುದು ಗಮನಾರ್ಹ ಸಂಗತಿ.

''ಹೊರನಾಡಲ್ಲಿ ನೆಲೆಸಿರುವ ಕನ್ನಡಿಗರು, ಸ್ವಯಂ ವ್ಯಕ್ತ ಕಾರಣಗಳಿಗಾಗಿ ಕನ್ನಡೇತರ ಕ್ಷೇತ್ರಗಳಲ್ಲೇ ವ್ಯವಹಾರಿಕವಾದ ದುಡಿಮೆಯನ್ನು ಅವಲಂಬಿಸಿರಬೇಕಾಗಿದೆ. ಆದರೆ, ಅವರು ಕನ್ನಡ ನಾಡನ್ನಾಗಲೀ ನುಡಿಯನ್ನಾಗಲೀ ಕನ್ನಡದ ಸಾಂಸ್ಕೃತಿಕ ಪರಂಪರೆಯನ್ನಾಗಲೀ ಮರೆತಿಲ್ಲವೆಂಬುದು ದೇಶ ವಿದೇಶಗಳಲ್ಲಿರುವ ಕನ್ನಡಿಗರ ಚಟುವಟಿಕೆಗಳಿಂದ ವ್ಯಕ್ತವಾಗುತ್ತಿದೆ'' ಎಂಬುದಾಗಿ ಸಾಹಿತಿ ವ್ಯಾಸರಾಯ ಬಲ್ಲಾಳ ಅವರು ಹೊರನಾಡ ಕನ್ನಡಿಗರ ಕುರಿತು ಬರೆದ ಲೇಖನವೊಂದರಲ್ಲಿ ಅಭಿಪ್ರಾಯಪಟ್ಟಿದ್ದಾರೆ.

### ಆಗಬೇಕಾದದ್ದೇನು?

❋ ಕಳೆದ ಒಂದೆರಡು ದಶಕಗಳಿಂದ ಗಡಿನಾಡು ಹಾಗೂ ಕನ್ನಡ ಶಿಕ್ಷಣ ಕ್ಷೇತ್ರ ಸೊರಗುತ್ತಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರಕಾರ ವಿಶೇಷವಾಗಿ ಸ್ಪಂದಿಸಬೇಕು.

❋ ಕನ್ನಡಿಗರು ಹೆಚ್ಚು ಸಂಖ್ಯೆಯಲ್ಲಿ ನೆಲೆಸಿರುವ ಮದ್ರಾಸ್, ಗೋವಾ, ಮುಂಬೈ, ಹೈದರಾಬಾದ್, ಮೊದಲಾದ ಕಡೆ 'ಕನ್ನ'ಡ ಭವನಗಳನ್ನು 'ಮಾಹಿತಿ ಕೇಂದ್ರ'ಗಳನ್ನು ಸ್ಥಾಪಿಸಿ ಹೆಚ್ಚು ಪ್ರವಾಸಿಗರು ಕರ್ನಾಟಕಕ್ಕೆ ಬರುವಂತೆ ಮಾಡಬಹುದು. 'ಪ್ರವಾಸೋದ್ಯಮ'ವನ್ನು ಸರಕಾರ ಬಲಪಡಿಸಲು ಹೊರನಾಡ ಸಂಘ ಸಂಸ್ಥೆಗಳ ಸಹಯೋಗವನ್ನು ಪಡೆಯಬಹುದು.

❋ ಹೊರನಾಡ ಕನ್ನಡ ಸಂಘ ಸಂಸ್ಥೆಗಳ ಅಭಿವೃದ್ಧಿಯತ್ತಲೂ, ಸರಕಾರ ಮುತುವರ್ಜಿ ವಹಿಸಬೇಕು. ತಮ್ಮದೇ ಆದ ಕಟ್ಟಡಗಳನ್ನು ಕಟ್ಟಿಕೊಳ್ಳಲು 'ಆರ್ಥಿಕ ಸಹಾಯ' ನೀಡಬೇಕು.

❋ ಕರ್ನಾಟಕ ಸರಕಾರ ಹೊರನಾಡ ಕನ್ನಡಿಗರ ಅಭಿವೃದ್ಧಿಗೆ ತನ್ನ ವಾರ್ಷಿಕ ಬಜೆಟ್‌ಲ್ಲಿ 10 ಕೋಟಿ ರೂಪಾಯಿ ತೆಗೆದಿರಿಸಬೇಕು.

❋ ಸಂಸ್ಕೃತಿ ಇಲಾಖೆ ಹೊರನಾಡ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಹೀಗಾಗಿ ಪ್ರತ್ಯೇಕ 'ಹೊರನಾಡ ಕನ್ನಡ ಪ್ರಾಧಿಕಾರ' ವೊಂದನ್ನು ಅಗತ್ಯ ಕರ್ನಾಟಕ ಸರಕಾರ ತುರ್ತಾಗಿ ಸ್ಥಾಪಿಸಿ ಕನ್ನಡ ಹೊರನಾಡಿನಲ್ಲಿ ಅಳಿದು ಹೋಗದಂತೆ ತಡೆಯಬೇಕು.

❋ ಹೊರನಾಡ ಲೇಖಕರ ಕೃತಿಗಳನ್ನು ಕರ್ನಾಟಕ ಸರಕಾರ ಖರೀದಿಸಬೇಕು. ಈಗಿರುವ ಗ್ರಂಥಾಲಯ ಯೋಜನೆಗಳಲ್ಲಿ ಈ ಭಾಗದ ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ.

❋ ಕರ್ನಾಟಕದ ವಿವಿಧ ಅಕಾಡೆಮಿಗಳಲ್ಲಿ ಹೊರನಾಡ ಕನ್ನಡಿಗರಿಗೆ ಪ್ರಾತಿನಿಧ್ಯ ಸಿಗಬೇಕು. ಪ್ರಶಸ್ತಿ ಪುರಸ್ಕಾರ ಕೊಡುವಾಗ ಹೊರಭಾಗದ ಯೋಗ್ಯ ವ್ಯಕ್ತಿ, ಸಂಸ್ಥೆಗಳನ್ನು ಗಮನಿಸಬೇಕು.

❋ ಹೊರನಾಡಿನಲ್ಲಿ ಕನ್ನಡ ಅಧ್ಯಯನದಲ್ಲಿ ತೊಡಗಿಸಿಕೊಂಡ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಬೇಕು.

❋ ಹೊರನಾಡಿನ ಗಡಿನಾಡಿನ ಕೆಲವು ಕನ್ನಡ ಶಾಲೆಗಳಲ್ಲಿ ಸದ್ಯ ಪ್ರಾಥಮಿಕ ಶಾಲೆಯಲ್ಲಿ ಒಂದರಿಂದ ನಾಲ್ಕನೆಯ ಇಯತ್ತೆಯವರೆಗೆ 40 ವಿದ್ಯಾರ್ಥಿಗಳಿಗಾಗಿ ಒಬ್ಬ ಶಿಕ್ಷಕರನ್ನು ಕೊಡಲಾಗುತ್ತಿದೆ. ಈ ನಿಯಮ ಬದಲಿಸಿ ಕನಿಷ್ಠ 15 ವಿದ್ಯಾರ್ಥಿಗಳಿದ್ದರೆ ತರಗತಿ ನಡೆಸುವುದಕ್ಕೆ ಅವಕಾಶ ನೀಡಬೇಕು.

❋ ಅಲ್ಪಸಂಖ್ಯಾತ ಭಾಷಿಕರಿಗೆ ಸಿಗುವ ಸೌಲಭ್ಯ ರಿಯಾಯಿತಿಗಳು ಗಡಿ ಭಾಗದ ಹಾಗೂ ಹೊರನಾಡ ಕನ್ನಡಗರಿಗೆ ಸಿಗುವಂತಾಗಬೇಕು.

### ಪರಾಮರ್ಶನ ಗ್ರಂಥಗಳು


1. ಗೋಪಾಲ ರಾವ್ ಎಚ್. ಎಸ್.; ಕರ್ನಾಟಕ ಏಕೀಕರಣದ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು. 1996
2. ಕಲ್ಲನ ಗೌಡ ಪಾಟೀಲ; ಕರ್ನಾಟಕ ಏಕೀಕರಣದ ಹಾದಿಯಲ್ಲಿ ; ವಿವೇಕ ಪ್ರಕಾಶನ ಹುಬ್ಬಳ್ಳಿ, 1986
3. ಬರಗೂರು ರಾಮಚಂದ್ರಪ್ಪ ಕನ್ನಡಾಭಿಮಾನ, ಅಂಕಿತ ಪುಸ್ತಕ ಬೆಂಗಳೂರು 2002
4. ಡಾ. ಜಿ. ಎನ್. ಉಪಾಧ್ಯ ಹಾಗೂ ಇತರ ಸಂಪಾದಕರೊಂದಿಗೆ, ಅವಲೋಕನ, ಸಾಹಿತ್ಯ ಬಳಗ, ಮುಂಬಯಿ 2004
5. ಕನ್ನಡ ವಾರ್ಷಿಕ 1991, 1992, 1993 ಪ್ರಸಾರಾಂಗ ಕನ್ನಡ ವಿವಿ ಹಂಪಿ.
6. ಅವಲೋಕನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು 1985
7. ಚಿದಾನಂದ ಮೂರ್ತಿ ಎಂ., 'ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ', ಸಾಹಿತಿಗಳ ಕಲಾವಿದರ ಬಳಗ, ಬೆಂಗಳೂರು 1989
8. ಹೊರನಾಡ ಕನ್ನಡ ಸಂಸ್ಕೃತಿ ಸಮಾವೇಶ ಮುಂಬೈ 2004 ಇದರ ವಿಶೇಷಾಂಕ
9. ಕನ್ನಡ ನಾಡು ನುಡಿ ರಕ್ಷಣೆ : ಪಂ. ಪ್ರಕಾಶ್ ರಾವ್ ಪಯ್ಯಾರ್, ಧ್ವನಿ ಪ್ರತಿಷ್ಠಾನ, ಯು.ಎ.ಇ. 2005
10. ಶ್ರೀನಿವಾಸ ಹಾವನೂರ : ಹೊಸ ಗನ್ನಡದ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು 1974
11. ಅಭಿಮತ, ಲಹರಿ, ಗೋವಾದರ್ಪಣ, ಹೊರನಾಡ ಕನ್ನಡ ಸಂಗಾತಿ, ಅಕ್ಷಯ, ಮೊಗವೀರ ಮೊದಲಾದ ಮಾಸ ಪತ್ರಿಕೆಗಳು.

## ಕೃತಿ ಪರಿಚಯ

ವಿದ್ವಾನ್ ಶಂಕರ ನಾರಾಯಣ ರಾಯರು ಮುಂಬಯಿಯಲ್ಲಿ ಕಳೆದ 54 ವರ್ಷಗಳಿಂದಲೂ ಸಂಗೀತ ಶಿಕ್ಷಣವನ್ನು ಕೊಡುತ್ತಾ ಅನೇಕ ಸಂಗೀತ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದ್ದಾರೆ. ಈ 86ನೇ ವಯಸ್ಸಿನಲ್ಲೂ ಉತ್ಸಾಹದಿಂದ ಶ್ರೀ ಪುರಂದರದಾಸರ ಮತ್ತು ಶ್ರೀ ಕನಕದಾಸರ ಉತ್ತಮ ಕೃತಿಗಳನ್ನು ಸಂಗ್ರಹಿಸಿ, ಸ್ವರ ಸಂಯೋಜನೆ ಮಾಡಿ ಪ್ರಕಟಿಸಿದುದು ನಿಜಕ್ಕೂ ಪ್ರಶಂಸನೀಯ.

### ರಾಗ ಮತ್ತು ಸ್ವರ ಸಂಯೋಜನೆ ಸಹಿತ ಶ್ರೀ ಪುರಂದರದಾಸರ ಕೃತಿಗಳು

ಈ ಸ್ವರ ಸಂಯೋಜಿತ ಕೃತಿ ರತ್ನ ಮಾಲೆಯಲ್ಲಿ ವಿವಿಧ ರಾಗಗಳಲ್ಲಿ ಸ್ವರ ಸಂಯೋಜಿಸಿದ 31 ಕೃತಿಗಳು 10 ರಾಗ ಮಾಲಿಕೆ ಕೃತಿಗಳು 8 ಸೂಳಾದಿಗಳು 9 ನವರತ್ನ ಮಾಲಿಕೆ ಕೃತಿಗಳು, ಅಷ್ಟು ಕೃತಿ ಮಾಲೆಗಳನ್ನು ಪ್ರಕಟಿಸಲಾಗಿದೆ.




ರಾಗ ಮಾಲಿಕೆ ಕೃತಿಗಳು ಅದರಲ್ಲೂ 'ಕುಣಿದಾಡೋ ರಂಗ'ಕ್ಕೆ ಅಳವಡಿಸಿರುವ ಚಿಟ್ಟೆ ಸ್ವರಗಳು ಪಾಂಡಿತ್ಯ ಪೂರ್ಣವಾಗಿದೆ. ಅಷ್ಟು ಕೃತಿ ಮಾಲೆಯಲ್ಲಿ ಶ್ರೀ ಪುರಂದರದಾಸ ದೇವರನಾಮ, ಉಗಾಭೋಗಗಳನ್ನು ಸ್ವರಜತಿಯಂತೆ, ವರ್ಣದಂತೆ, ಸ್ವರ ಸಾಹಿತ್ಯ ಕೃತಿಯಂತೆ ರಾಗ ಸಂಯೋಜನೆ ಮಾಡಿರುವುದು ರಾಯರಿಗಿರುವ ಸಂಗೀತ ಶಾಸ್ತ್ರಜ್ಞಾನದ ಪ್ರೌಢಿಮೆಯನ್ನು ತೋರಿಸುತ್ತದೆ. ಒಟ್ಟಿನಲ್ಲಿ ಈ ಸ್ವರ ಸಂಯೋಜನ ಕೃತಿಗಳು ಕೇವಲ ಸಂಗೀತ ಕಲಿಯುವವರಿಗೆ ಮಾತ್ರವಲ್ಲ, ಕಚೇರಿಯನ್ನು ಮಾಡುವ ಕಲಾವಿದರಗಳಿಗೂ ಉಪಯೋಗವಾಗುತ್ತದೆ.


ವಿದ್ವಾನ್ ಶ್ರೀ ಶಂಕರನಾರಾಯಣರು ಈ ಕೃತಿಗಳನ್ನು ಸಿದ್ಧಪಡಿಸಿ ಹಸ್ತ ಪ್ರತಿಗಳನ್ನು ವಿವಿಧ ವಿದ್ಯಾಪಾರಂಗತ ಪ್ರೊ. ಎಸ್. ಕೆ. ರಾಮಚಂದ್ರ ರಾಯರಿಗೆ ಪರಿಶೀಲಿಸಲು ಕೊಟ್ಟಾಗ, ಅವರು ಅದನ್ನು ಮೆಚ್ಚಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಿಗೆ ಪ್ರಕಟಣೆಗಾಗಿ ಕಳುಹಿಸಿಕೊಟ್ಟರು. ಇದರಿಂದಲೇ ಇವರ ಸ್ವರ ಸಂಯೋಜನೆ ಮೌಲ್ಯ ಎಷ್ಟರ ಮಟ್ಟಿಗೆ ಉತ್ಕೃಷ್ಟವಾದುದು ಎಂಬುದನ್ನು ಎಲ್ಲರೂ ತಿಳಿಯಬಹುದು. ಪ್ರೊ. ಎಸ್. ಕೆ. ರಾಮಚಂದ್ರ ರಾಯರಿಂದ ಪಡೆದ ಶಿಫಾರಸು ಶಂಕರನಾರಾಯಣ ರಾಯರಿಗೆ ಸಂದ ದೊಡ್ಡ ಪ್ರಶಸ್ತಿ ಎಂದೇ ಹೇಳಬಹುದು. ಸಂಗೀತ ವಿದ್ಯಾಸಾಗರ ಗಾನ ಸಾಹಿತ್ಯ ಶಿರೋಮಣಿ ವಿದ್ವಾನ್ ಶ್ರೀ ಆರ್. ಆರ್. ಕೇಶವ ಮೂರ್ತಿಯವರು ಈ ಕೃತಿಗೆ ಮುನ್ನುಡಿಯನ್ನು ಬರೆಯುತ್ತಾ ''ತಾವು ನಿರ್ಮಿಸಿರುವ ವಾಗ್ಗೇಯ ರೂಪವು ತಮ್ಮ ವಿದ್ವತ್ತಿಗೆ ಪ್ರತಿಬಿಂಬವಾಗಿದೆ'' ಎಂದು ಪ್ರಶಂಸಿಸಿರುವುದು ರಾಯರಿಗೆ ಸಂದ ಗೌರವವಾಗಿದೆ.

### ಸ್ವರ ಸಂಯೋಜನೆ ಸಹಿತ ಶ್ರೀ ಕನಕ ದಾಸರ ಕೃತಿಗಳು

ಈ ಕೃತಿ ರತ್ನಮಾಲೆಯಲ್ಲಿ ವಿವಿಧ ರಾಗಗಳಿಂದ ಸಂಯೋಜಿಸಿ 36 ಕೃತಿಗಳು ರಾಗ ಮಾಲಿಕೆಯಲ್ಲಿ ಸ್ವರ ಸಂಯೋಜಿಸಿದ 16 ಕೃತಿಗಳು ಇದೆ. ರಾಗ ಮಾಲಿಕೆಯ ತಲ್ಲಣಿಸದಿರು ಕಂಡ್ಯಾ ಈತನೀಗ ವಾಸು ದೇವನೂ, ನೀ ಮಾಯೆಯೊಳಗೋ, ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ ಕೃತಿಗಳು ವಿದ್ವತ್ ಪೂರ್ಣವಾಗಿದ್ದು ಮೆಲುಕು ಹಾಕುವಂತಿದೆ. ಈ ಕೃತಿಯೂ ಸಹ ಸಂಗೀತ ಕಲಿಯುವವರಿಗೆ ಅಲ್ಲದೆ ಕಚೇರಿಯನ್ನು ಮಾಡುವ ಕಲಾವಿದರುಗಳಿಗೂ ಉಪಯುಕ್ತವಾಗಿದೆ.

ಈ ಕೃತಿಗೆ ಮುನ್ನುಡಿ ಬರೆದ ವಿದುಷಿ ಶ್ರೀಮತಿ ಎ. ರಾಜಮ್ಮ ಕೇಶವ ಮೂರ್ತಿಯವರು ''ಕನಕದಾಸರ ಕೀರ್ತನೆಗಳಿಗೆ ಸ್ವರ ಮಟ್ಟು ಹಾಕಿ ಸಂಗೀತ ಪ್ರಪಂಚಕ್ಕೆ ಒಂದು ಒಳ್ಳೆಯ ಕೊಡುಗೆ ನೀಡಿದವರಲ್ಲಿ ನೀವು ಅಗ್ರ ಪಂಕ್ತಿಗೆ ಸೇರಿರುತ್ತೀರಿ ಎಂದರೆ ಅತಿಶಯೋಕ್ತಿಯಲ್ಲ'' ಎಂದು ಪ್ರಶಂಸಿಸಿರುವುದು ಸಮಂಜಸವಾಗಿದೆ. ಕನಕದಾಸರ ಕೃತಿಗಳನ್ನು ಸಂಗ್ರಹಿಸಿ ಬಹಳ ಮಂದಿ ಪ್ರಕಟಿಸಿದ್ದಾರೆ. ಆದರೆ ಸ್ವರ ಸಂಯೋಜನೆ ಸಹಿತ ಪ್ರಕಟವಾಗಿರುವುದು ಇದೆ ಮೊದಲು.

ಶ್ರೀ ಶಂಕರನಾರಾಯಣ ರಾಯರು ನಿಜಕ್ಕೂ ಅಭಿನಂದ ನಾರ್ಹರು. ಈ ಎರಡೂ ಪುಸ್ತಕಗಳನ್ನೂ ಸಹ ಬೆಂಗಳೂರಿನ ಅಂಕಿತ ಪುಸ್ತಕ ಪ್ರಕಾಶನದವರು ಪ್ರಕಟಿಸಿದ್ದಾರೆ. ಶ್ರೀ ಶಂಕರನಾರಾಯಣ ರಾಯರು




ತಮ್ಮ ಎರಡೂ ಕೃತಿಗಳನ್ನು ತಮ್ಮ ಗುರುಗಳಿಗೆ ಅರ್ಪಿಸಿ ತಮ್ಮ ಗುರು ಭಕ್ತಿಯನ್ನು ಮೆರೆದಿದ್ದಾರೆ. ಈ ಎರಡು ಕೃತಿಗಳೇ ಅಲ್ಲದೆ ರಾಯರು 50 ಕ್ಕೂ ಹೆಚ್ಚು ಸ್ವರಜತಿಗಳನ್ನು, ವರ್ಣಗಳನ್ನು, ಕೀರ್ತನೆಗಳನ್ನು ರಚಿಸಿದ್ದಾರೆ. ಒಂದೊಂದೂ ಕಲಿಯು ವರಿಗೂ, ಕಚೇರಿ ಮಾಡುವವರಿಗೂ ಅನುಕೂಲವಾಗಿದೆ. ಈ 86 ವರ್ಷ ಪ್ರಾಯದ ಯುವಕರು, ತಮ್ಮ ಸೋದರ ಮಾವ ನಿಟ್ಟೂರ್ ಶ್ರೀನಿವಾಸ ರಾಯರಂತೆ ಶತಮಾನೋತ್ಸವವನ್ನು ಆಚರಿಸಿ, ಸಂಗೀತ ಪ್ರಪಂಚಕ್ಕೆ ಇನ್ನು ಹೆಚ್ಚಿನ ಕಾಣಿಕೆ ನೀಡುವಂತಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ.

- ಬಿ. ನಾಗಭೂಷಣ


## MATRIMONIAL

Wanted Kannada Smartha Brahmin (HK) Employed Girl For 28 yrs/5'8'' Boy based at Mumbai.
See Details in :
kannadamatrimonial.com - k249151
Contact No. : 32989086
Mobile No. : 9869659118

***

Wanted Kannada, Gowda working boy for 25.7 yrs Girl based at New Mumbai B.Com graduate, working girl.
Contact No. 32590332

***

# IPTA Mumbai & The Mysore Association, Bombay

*present*

## 35TH INTER COLLEGIATE DRAMA COMPETITION-2006

*- Shaili Sathyu*

IPTA, mumbai in collaboration with the Mysore Association, Bombay recently celebrated the 35th year of its inter collegiate drama competition for one-act hindi plays. For the last 34 years, IPTA has been encouraging young talent in the field of theatre and also creating theatre awareness among college students.

Inspired by shri Prithviraj Kapoor's career as a complete theatre person, IPTA started the inter collegiate drama competition in 1972 and instituted the trophy for the best production in his memory. For the past six years, the Mysore Association has associated itself with ipta in staging these competitions.

2006 is also the centenary year of late Shri Prithviraj Kapoor. On this occasion, the best plays from the IPTA ICDC will be staged at the world famous prithvi theatre Festival in Nov 2006. It is indeed our pleasure that students performing in our Competition will get a chance to present their play in such a prestigious event.

The elimination round was held at the Mysore Association on 8th, 9th, 10th and 11th sept 2006. The following colleges took part in the Competition:

### Elimination Round

**Fri 8th Sept - 11 Am Onwards**

| **Colleges** | | Plays |
|---|---|---|
| 1 | Bhavan's College | Stambh |
| 2 | Narsee Monjee College Of Commerce And Economics | Poornaviram |
| 3 | Annasaheb Vartak College Of Arts, Science And Commerce | Sauda |
| 4 | Thakur College Of Science And Commerce | Kho |

**Sat 9th Sept - 11 Am Onwards**

| | | |
|---|---|---|
| 1 | Lords College Of Commerce And Science | Sambhavami Yuge Yuge |
| 2 | R.A.Podar College Of Commerce And Economics | Alvida |
| 3 | Rizvi College Of Arts, Science And Commerce | Zahak |
| 4 | R.J.Thakur College Of Arts And Commerce | Not Only In Wadala |
| 5 | Samadhiya College Of Arts And Commerce | Satyameva Jayate |
| 6 | D.G. Ruparel Jr. College Of Arts, Science And Commerce | Dharmaputra |

**Sun 10th Sept - 11 Am Onwards**

| | | |
|---|---|---|
| 1 | Shankar Narayan College Of Arts, Commerce And Science | Kaal Kothari |
| 2 | Sathaye College | We The People |
| 3 | Maniben Nanavati Women's College | Nayak |
| 4 | Mithibai College Of Arts, Science And Commerce | Tax Free |
| 5 | Prahladrai Dalmia Lions College of Commerce And Economics | Gharonda |

**Mon 11 Sept - 2 Pm Onwards**

| | | |
|---|---|---|
| 1 | Usha Pravin Gandhi College Of Management | Kasturi |
| 2 | Lala Lajpatrai College Of Commerce And Economics | Nadamat |
| 3 | G.n. Khalsa College | Jo Roz Mare |
| 4 | Jai Hind College | Jungle Jungle |
| 5 | New Law College | Kya Main Tumhe Pasand Hoon? |
| 6 | Dwarkadas J.sanghvi College Of Engineering | Baaki Itihaas |

The Following Colleges Made It Ti The Finals Which Were Staged At Tejpal Auditorium.

1. Sathaye College **- We The People**
2. Usha Pravin Gandhi College Of Management - **Kasturi**
3. D.G. Ruparel College Of Arts, Science And Commerce - **Dharmaputra**
4. P. D. Lions College Of Commerce And Economics **- Gharonda**
5. G.n. Khalsa College Jo Roz Maren
6. Mithibai College Of Arts, Science And Commerce **- Tax Free**

### Prizes

***Best Production***

Prithviraj Kapoor Trophy (Rotating), Certificate And Cash Prize Of Rs.5001/-

*Dharmaputra - D.G. Ruparel College Of Arts, Science & Commerce*

***2nd Best Production***

Manmohan Krishna Trophy (Rotating), Certificate And Cash Prize Of Rs.4001/-

*Gharonda - P.D. Lions College of Commerce & Economics*

***Outstanding Peformance* (Male or Female)**

Balraj Sahni Trophy (Rotating), Certificate And Cash Prize of Rs.3001/-

**Ms. Sangam Narvekar** (Character- Aurat)

*Dharmaputra -D.G. Ruparel College of Arts, Science & Commerce*

***Best Actor***

Certificate & Cash Prize of Rs.2001/-

**Mr. Kunal Jadhav (Character - Aadmi)**

*Dharmaputra- D.G. Ruparel College of Arts, Science & Commerce*

***Best Actress***

Certificate & Cash Prize Of Rs.2001/-

**Ms. Dimpee Shah (Character - Kasturi)**

*Kasturi - Usha Pravin Gandhi College of Management*

***Best Director***

R.m.singh Trophy (Rotating), Certificate And Cash Prize Of Rs.2001/-

Mr. Rajendra Shisatkar

*Gharonda- P.D. Lions College of Commerce & Economics*

***Best Script***

K.a.abbas Trophy (Rotating), Certificate And Cash Prize Of Rs.2001

**Mr. Rajesh Deshpande**

*Gharonda - P.D. Lions College of Commerce & Economics*

***Critics Award***

Kaifi Azmi Trophy (Rotating) And Certificate

*Kasturi - Usha Pravin Gandhi College of Management*

**Judges For The Finals**

Ms. Shama Zaidi, Mr. Pravin Solanki, Mr. B.P.Singh

## ವಿಶ್ವೇಶ್ವರಯ್ಯ ದಿನಾಚರಣೆ




ಮನುಷ್ಯನ ಜೀವನದಲ್ಲಿ ಅಸಾಧ್ಯವೆಂಬುದಿಲ್ಲ. ನಾವು ಯಾವುದೇ ಕೆಲಸವನ್ನು ನಿಷ್ಠೆಯಿಂದ ಹಾಗೂ ಹೃದಯ ಪೂರ್ವಕವಾಗಿ ಮಾಡಿದಾಗ ಅದಕ್ಕೆ ಉತ್ತಮ ಫಲಿತಾಂಶ ದೊರಕುತ್ತದೆ. ವಿದ್ಯಾರ್ಥಿಗಳು ಮಾಡುವ ಯಾವುದೇ ಉತ್ತಮ ಕೆಲಸಕ್ಕೂ ಶಿಕ್ಷಕರು ಮನ್ನಣೆಯನ್ನು ನೀಡುವುದು ಅಗತ್ಯ ಎಂದು ತಿಳಿಸುತ್ತಾ ಪ್ರತಿಯೊಬ್ಬರು ಜಾಣ್ಮೆಯಿಂದ ಮತ್ತು ಸತತ ಪ್ರಯತ್ನ ಹಾಗೂ ಕಠಿಣ ಪರಿಶ್ರಮದಿಂದ ದುಡಿದಾಗ ಯಶಸ್ಸು ಸಾಧ್ಯವೆಂದು ಅಂಧೇರಿಯ ಸರದಾರ ಪಟೇಲ ಇಂಜಿನಿಯರಿಂಗ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ, ಹಾಗೂ ನೆರುಲ್‌ನ S.I.E.S. ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯರಾದ ಡಾ. ಪಿ. ವಿ. ಪರಮೇಶ್ವರನ್ (ಸಿವಿಲ್ ಇಂಜಿನಿಯರ್) ವಿದ್ಯಾರ್ಥಿಗಳಿಗೆ ಹಿತವಚನವನ್ನು ನೀಡಿದರು.

ಅವರು ಸೆಪ್ಟೆಂಬರ್ 15 ರಂದು ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಆಚರಿಸಿದ ವಿಶ್ವೇಶ್ವರಯ್ಯ ದಿನಾಚರಣೆಯ ಸಂದರ್ಭದಲ್ಲಿ ''ವಿಜ್ಞಾನ ಪ್ರಕಲ್ಪಗಳು'' (Project) ಸ್ಪರ್ಧೆ ಮತ್ತು ಪ್ರದರ್ಶನದ ಉದ್ಘಾಟನೆಗೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ಅವರು ತಮ್ಮ ಮಾತನ್ನು ಮುಂದುವರಿಸುತ್ತಾ ವಿಶ್ವೇಶ್ವರಯ್ಯನವರ ಶಿಸ್ತು, ಸಂಯಮ, ಕರ್ತೃತ್ವ ಶಕ್ತಿ, ಕಾರ್ಯತತ್ಪರತೆ ಹಾಗೂ ಮುಂದಾಲೋಚನೆಗಳ ಕುರಿತು ಸವಿವರವಾಗಿ ತಿಳಿಸುತ್ತಾ, ಈ ಶಾಲೆಯ ಸ್ಥಾಪಕರಲ್ಲಿ ಓರ್ವರಾದ ವಿಶ್ವೇಶ್ವರಯ್ಯನವರ ಹುಟ್ಟು ಹಬ್ಬವನ್ನು ಈ ರೀತಿಯಾಗಿ ಅರ್ಥಪೂರ್ಣವಾಗಿ ಆಚರಿಸುವುದರ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಕರೆಯಿತ್ತರು.

ಫಲಿತಾಂಶದ ವಿವರ

ಜ್ಯೂನಿಯರ್ ವಿಭಾಗ

ಪ್ರಥಮ - ಇಂಗ್ಲೀಷ್ ವ್ಯಾಕರಣ- 7ನೇ ತರಗತಿ

ದ್ವಿತೀಯ - ಅಂಕೆ ಸಂಖ್ಯೆಗಳು - 6ನೇ ತರಗತಿ

ತೃತೀಯ - ಸಾಮಾನ್ಯ ಗಣಿತ- 5ನೇ ತರಗತಿ

ಸೀನಿಯರ್ ವಿಭಾಗ

ಪ್ರಥಮ - ಆಹಾರ ಸರಪಳಿ - 9ನೇ ತರಗತಿ

ದ್ವಿತೀಯ - ಗಾಜಿನ ಪ್ರಕಾರಗಳು- 8ನೇ ತರಗತಿ

ತೃತೀಯ - ಸೌರ ಮಂಡಳ - 8ನೇ ತರಗತಿ

ವರದಿ: ಪ್ರಕಾಶ್ಚಂದ್ರ ಎಂ. ಆರ್.

## VEENE SHESHANNA AWARD TO SHRI. M. S.GOPALKRISHNAN



The Veene Sheshanna Memorial Award is presented to a senior instrumentalist and carries a purse of Rs.25,000/-. The award is sponsored by Dr. Veerendra Hegde of Dharmastala. This year the aaward was presented to Padmashree Shri. M.S. Gopalkrishnan, at Bangalore on 24-09-2006 by His Highness, Shri. Shri. Vidyaprasanna Teertha Swamijee of Kukke Subramanya Math.

Swaramurthy V.N. Rao Memorial Award is sponsored by Dr. A. H. Rama Rao and is presented every year to a veteran vocalist. This award too carries a purse of Rs. 25,000/- This year Shri K. Jairaj, I.A.S., Commissioner of Banagalore City Corporation presented the award to Dr. R. K. Srikanthan, veteran vocalist at the same venue.

The function was held under the joint auspices of the Bangalore Gayana Samaja and Swaramurthy V.N. Rao Memorial Trust. Reputed musicologist Dr. V. V. Srivatsa, Dr. A.H. Rama Rao, (President, National Education Trust) and Shri. Surendra Kumar of Dhramasthala graced the function as guests. The function was followed by music concets by Shri M.S. Gopalkrishnan and Dr. R.K. Srikanthan.

## ಮೈಸೂರು ಸಂಗೀತ ವಿದ್ಯಾಲಯದ ಫಲಿತಾಂಶದ ಸಾಧನೆಗಳು

ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾನಿಲಯವು ಕಳೆದ 24 ವರ್ಷಗಳಿಂದಲೂ, ಸಂಗೀತ ಶಿಕ್ಷಣವನ್ನು ಕರ್ನಾಟಕ ಸರಕಾರದ ಸಂಗೀತ ಪರೀಕ್ಷೆಗಳ ಪಠ್ಯಕ್ರಮದಂತೆ ಕೊಡುತ್ತಾ ಬಂದಿದ್ದು, ಪ್ರತಿ ವರ್ಷದ ಸಂಗೀತ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಇದುವರೆಗೆ ಉತ್ತಮ ಶ್ರೇಯಾಂಕದೊಡನೆ ಶೇ. 100% ತೇರ್ಗಡೆ ಯಾಗಿರುತ್ತಾರೆ.

ಇದೇ ಮೇ - ಜೂನ್‌ನಲ್ಲಿ ನಡೆದ ಸಂಗೀತ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿದ್ದು ವಿದ್ಯಾಲಯವು 7 ಅಭ್ಯರ್ಥಿಗಳನ್ನು ಸಂಗೀತ ಪರೀಕ್ಷೆಗೆ ಕಳುಹಿಸಿದ್ದು ಎಲ್ಲರೂ ಉತ್ತಮ ಶ್ರೇಯಾಂಕದೊಡನೆ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ.

ತೇರ್ಗಡೆಯಾದ ಅಭ್ಯರ್ಥಿಗಳ ವಿವರ

ಹಾಡುಗಾರಿಕೆ ಜೂನಿಯರ್ ವಿಭಾಗ ಕುಮಾರಿಯವರಾದ ಅಪರ್ಣ (77.75%) ಸಿ. ಕೆ. ನಂದಿನಿ (74.52%) ದಿವ್ಯ (69.75%) ಸ್ನೇಹ (65.5%) ರೋಹಿಣಿ (60%)

ಮ್ಯಾಂಡೋಲಿನ್ ವಿಭಾಗದಲ್ಲಿ ಕುಮಾರ್ ಆಶೀಶ್ (83.5%) ಮತ್ತು ಕುಮಾರ್ ರಾಹುಲ್ (70%)

ಸಂಗೀತ ವಿದ್ಯಾಲಯದಿಂದ ಇದುವರೆಗೆ ಜೂನಿಯರ್ ವಿಭಾಗದಲ್ಲಿ 119, ಸೀನಿಯರ್ ವಿಭಾಗ ದಲ್ಲಿ 11, ವಿದ್ವತ್ ವಿಭಾಗದಲ್ಲಿ 4 ಅಭ್ಯರ್ಥಿಗಳು ಉತ್ತಮ ಶ್ರೇಯಾಂಕದಲ್ಲಿ ತೇರ್ಗಡೆ ಯಾಗಿರುತ್ತಾರೆ.

# FIRST EXPERIENCE

**• *Dr Girish Vichhivora***

Rarely would I visit my native place. Those were my study periods. Vacation would be spent in college itself. Hospital would always be working. Many times the term at the hospital would not have been completed. Where to go just for a few days? You need hard cash to spend on touring. Mostly I would spend my vacation in Mumbai only. When not on hospital duty, I would go for a few walks, sometimes saw a movie of two and otherwise spent time in library reading some new arrivals.

In the sixties, the standard of living was still quite low. Poverty was spread everywhere. Doctors were also few. In Mumbai, I was staying in the hostel but for meals I used to come to Mama's shop during evenings. Lunch box used to arrive in the afternoons. In the evenings, some patients would be there with minor ailments. I gave them prescriptions. I followed a strict rule that till I complete my M.B.B.S., I shall not take a single pie from anybody. I was not qualified yet. The need for money was so great that I was afraid, once I start earning I may become possessed by it and forget my studies. I had seen a few such cases. The boys who had started earning during student days used to fail in their exams regularly. I had already appeared for my final exams. Results were not declared. Till the results are not declared, I had decided to continue with my resolve of not taking any fees.

One evening, I went to my brother's place for dinner. A doctor friend was going out for a few days. He had asked me to take care of his clinic. After attending to his clinic, I went over to my brother's house. After finishing dinner, brother spoke of my sister-in-law's cold. I checked her and gave some tablets. My brother was not satisfied. He requested that I should give her an injection. In opinion, there was no need to give her any injections. But brother was insisting. As I was still naive, I could not say no to him. I gave an injection to my sister-in-law. Before I could put back the things in my bag, she slept off, saying her vision was getting blurred. She perspired profusely and became unconscious. She had developed strong violent reactions to the injection. Immediately I gave her two injections as antidotes. I felt she was slightly better. I checked her blood pressure. It was very low. I decided to shift her to the hospital and called for the taxi. Even in the taxi, I kept giving her the antidotes. We went to the K.E.M. Hospital. All the doctors were known to me. On examination, it was proved that she had developed reactions to the injection. I requested them to admit her in the hospital. The casualty officer felt it was not necessary. Upon my insistence, he called the Registrar. He too seconded the officer's opinion. In the meantime, my sister-in-law again became unconscious. Again an antidote injection was given. She was them admitted to the hospital.

She was administered intravenous drips of saline with other medicines injected into it. The registrar said, 'Now you need not worry. You can sleep quietly'. I used to stay in K.E.M. Hospital's hostel in the same premises, yet I did not go to my room. Somehow my heart wasn't willing. Two hours passed. Sister-in-law was deeply asleep. I stayed awake. Again I felt her breathing was not normal. I took the measuring instrument from the nurse and checked her B.P. Immediately I asked the nurse to call for the Registrar. I felt it would be too late by the time wrote the note and sent the ward boy to his room. I ran up to his room and woke him up. He was a nice man. He had just received a sample of a new medicine. He took it. Both of us literally ran to the ward. I stood transfixed. Sister-in-law was on her last legs! She was put on oxygen. I gave whatever injections the registrar prescribed. The entire bottle of that new medicine was poured into the glucose drip. Within five minutes, sister-in-law recovered and started speaking as if nothing had happened before.

The Registrar had done his M.D. He told me that as long as the effect of the injection I gave first remains in her blood, this situation would surely develop. The effect of the injection would last for 24 hours. He poured the sample of the new medicine into the glucose bottle and kept it on. Made me listen to a piece of his mind and said, 'Don't move from here. We have to keep proper watch for 24 hours'.

That new medicine had worked. In all this turmoil, time had passed and it was nearly 5 O'clock in the morning. Sister-in-law was now feeling better. She said. 'you go to your room and have some sleep'. But I wasn't prepared to. Even if I went to my room, how could I sleep? Patient was my own sister-in-law, almost like my parent. The injection I gave was not wrong, but I didn't have the rights to practice independently as yet. If tomorrow something untoward happens, a black mark against my name is a sure thing. Besides the police case, I may have to even lose the rights to practice my profession for life. My lifeboat would be burned to ashes just before reaching the shores. My professional life would end even before it is started. I was engulfed with such thoughts. I was frightened. I was confused.

Around 7 O'clock, I went to my rooms. Having washed and bathed, I went back to the ward. Sister-in-law was now better. The Registrar also came to check up. Seeing her in better condition, he said, 'Now there is no danger'. I told him, 'I shall keep her here for three days. We don't have to take any chances. I will keep her without medication for a day under observation'. With smiling countenance he asked me, 'Why did you give that injection? Just for cold?'. I told him everything. I told that I had to bow down to brother's insistence. He went into reverie. After a few moments he spoke. 'Look this is the beginning of your profession. You must think independently and without letting anyone influence you, you must do exactly as you think is right. In your profession, parent, brother, or any elderly relative should not be allowed to interfere. If you cannot decide, take the opinion of a more learned and more experienced person. Never be pressurized by affections.' This golden advice is clearly etched in my mind still.


Sister-in-law recovered and came back home. Within a few days, everything was forgotten. But what an impact that episode had on me! Even now sometimes I dream of it and wake up suddenly. I see that I am perspiring profusely.

*Original Gujarati Story*

*- Translated by* ***- Bhavani***

MH/MR/ME/093/06-08
Date of Posting : 10-10-2006

# INTER COLLEGIATE DRAMA COMPETITION-2006



Sathaye College - WE THE PEOPLE



U.P.G. College of Management - KASTURI



D.G. Ruparel College - DHARMAPUTRA



P. D. Lions College - GHARONDA



G. N. Khalsa College - JO ROZ MAREN



Mithibai College - TAX FREE

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938